ಕೊರವಂಜಿ

KORAVANJI

Kannada Monthly

ಸಂಪಾದಕರು:

ಶ್ರೀ|| ರಾ. ಶಿ.

ಬರಹಗಾರರು:

ಶ್ರೀ|| ಪ್ರಕಾಶ್

ಶ್ರೀ|| ಎಲ್ಲೆನ್

ಶ್ರೀ|| ರಾಮು

ಶ್ರೀ|| ರಾ. ವೈ. ಸೂರಿ


ಶ್ರೀ|| ಕುಮಾರ್

ಶ್ರೀ|| ಬಚ್ಚ

ಶ್ರೀ|| ಪ್ರಸಾದ್

ಶ್ರೀ|| ಅ. ರಾ. ಸೆ.

ಇತ್ಯಾದಿ, ಇತ್ಯಾದಿ.




ಮಾರ್ಚಿ


೧೯೬೪

೨೫

ತಿಳಿನಗೆಯ ಮಾಸಪತ್ರಿಕೆ



ತಪ್ಪದೆ ನೋಡಿ!
ಕನ್ನಡ ನಾಡಿನ ಹಿರಿಮೆಯನ್ನು
ಎತ್ತಿಹಿಡಿಯುವ ಕ್ರಾಂತಿಕಾರಕ
ಐತಿಹಾಸಿಕ ಚಿತ್ರ ... ...
ಕನ್ನಡಿಗರ ಹೃದಯದಲ್ಲಿ ರೊಚ್ಚಿನ
ಕಿಚ್ಚೆಬ್ಬಿಸಿ, ಕರ್ನಾಟಕ ಸಾಮ್ರಾಜ್ಯದ
ಏಳಿಗೆಗೋಸ್ಕರ ದುಡಿದ
ಮಹಾವೀರನ ಕಥೆ... ...
ಸಂಗೀತ . . . ...ರಾಜನ್-ನಾಗೇಂದ್ರ
V.P.C Release
Arts & Coy.
KATAKA



ಸಂಪುಟ ೨೨ ಮಾರ್ಚಿ ೧೯೬೪ ಸಂಚಿಕೆ ೧೨

★ ಕುಹಕಿಡಿಗಳು ★

> ಕನ್ನಡ ಕುಲ ಪುರೋಹಿತರು ಕೆಣ್ಮರೆಯಾಗಿ ಚಿರಂಜೀವಿಗಳಾದುದನ್ನು
>
> —ಕೊರವಂಜಿಯು ಅರಿವ ಎಧೆಯಿಂದ ಕಂಡಳು.

* * * *

ಚೌ ಎನ್ ಲೈ ಅವರು ಭಾರತದ ಮೇಲೆ ವಿಮಾನದಲ್ಲಿ ಹಾರಿ ಹೋದಾಗ, ವಿಮಾನದ ನೆರಳು ನೆಲದಮೇಲೆ ಬಿದ್ದಿತ್ತಲ್ಲಾ !

—ಆ ನೆರಳನ್ನು ಕಂಡು ಕೆಲವರು ಕಮ್ಯೂನಿಷ್ಟರು ಕೈ ಮುಗಿದರಂತೆ!

* * * *

ಪಾನನಿರೋಧವನ್ನು ನಾನು ಯಶಸ್ವಿಯಾಗಿಸಬಲ್ಲೆ ಎಂದರಂತೆ ಮೊರಾರ್ಜಿ!

—ಚಿನ್ನ ಕೈಲಿ ಕೊಟ್ಟರೆ ಅದನ್ನು ೧೪ ಕ್ಯಾರಟ್ಟಿಗೆ ಇಳಿಸಿದ ಧೀರ. ಪಾನವನ್ನು ಕೈಲಿ ಕೊಟ್ಟರೆ ಸುಮ್ಮನೆ ಇರ್ತಾನೆಯೇ ?

* * * *

ತಾರ್ಸಿ ಮನೆಗೂ ಒಂದೇ, ಹೆಂಚಿನ ಮನೆಗೂ ಒಂದೇ, ಕಟ್ಟಡದ ಕರವನ್ನು ಹಾಕಿರುವುದು ಅನ್ಯಾಯ ಎಂದೊಬ್ಬರ ಅಂಬೋಣ.

—ಸ್ವಾಮಿ, ! ಸಮತಾಸಮಾಜದಲ್ಲಿ ಹುಟ್ಟಿದ ಮನುಷ್ಯರೆಲ್ಲರೂ ಒಂದೇ ಅದೇ ರೀತಿ ಕಟ್ಟಿದ ಮನೆಗಳೆಲ್ಲವೂ ಒಂದೇ ! ನ್ಯಾಯ ಅಲ್ಲವೇ ?

*　　*　　*　　*

ಕಾಶ್ಮೀರದಲ್ಲಿ ಖಾಜಿ ನ್ಯಾಯ ಮಾಡುಕ್ಕೆ ಶಾಸ್ತ್ರಿಗಳು ಹೋದರಂತೆ.

*　　*　　*　　*

ಹತ್ತೊಂಭತ್ತನೆಯ ಶತಮಾನದಲ್ಲಿ ಭಾರತದ ತುಂಬ ಥಗ್ಗರು, ಪಿಂಡಾರಿಗಳು ಹಾವಳಿ ನಡೆಸುತ್ತಿದ್ದರು. (ಹೇಳಿಕೆ)

— ಈಗಲೂ ಅವರೇ ರಾಜಕೀಯದ ಸೋಗು ಹಾಕಿಕೊಂಡು ಹಾವಳಿ ನಡೆಸುತ್ತಿದ್ದಾರೆ ಅಲ್ಲವೇ ?

*　　*　　*　　*

ಈ ವರ್ಷ ಯಾವುದೂ ತೀರ್ಮಾನಕ್ಕೆ ಬರುವ ಹಾಗೆ ಕಾಣಲಿಲ್ಲ !

—ಯೂನೋದಲ್ಲಿ ಕಾಶ್ಮೀರ: ಕ್ರಿಕೆಟ್‌ನಲ್ಲಿ ಟೆಸ್ಟ್ ಮ್ಯಾಚುಗಳು ; ಚೀನಾ ಭಾರತ ವಿವಾದ: ನಮ್ಮನೆಯಲ್ಲಿ ಅತ್ತೆ ಅತ್ತಿಗೆ ಜಗಳ ; ಪಕ್ಕದ ಮನೆಯ ಕಾಲೇಜ್ ಗೆಳತಿ ಪಾತು, ನನ್ನ ಸಲಹೆಗೆ ನೀಡಬೇಕಾದ ಉತ್ತರ.

*　　*　　*　　*

ಚೌ ಎನ್ ಲೈರವರು ಸಿರಿಮಾವೊ ಅವರ ಸಿಹಿ ಸಲಹೆಗೆ ಒಪ್ಪುತ್ತಾರೋ ಇಲ್ಲವೊ ಎಂದು ಈಜಿಪ್ಟಿನ Spaynx ಯೋಚಿಸುತ್ತಿದೆಯಂತೆ:

*　　*　　*　　*

ಮದ್ರಾಸಿನಲ್ಲಿ ಗೆದ್ದ ಡಿ. ಎಂ. ಕೆ. ಪಕ್ಷದವರು, ಕಾಂಗ್ರೆಸಿನ ಗುರುತಾದ ಎತ್ತು ಒಂದನ್ನು ಹದಿನೆಂಟು ರೂಪಾಯಿಗೆ ಕೊಂಡು, ಅದನ್ನು ಸದೆ ಬಡಿದರಂತೆ— ಕಾಂಗ್ರೆಸನ್ನು ಸೋಲಿಸಿದ ಹುಮ್ಮಸ್ಸಿನಲ್ಲಿ.

—ಇಂಥ ಜನರಿಗೆ ಓಟು ಕೊಡುವ ಹಕ್ಕಿದೆಯಲ್ಲಾ ಎಂದು ಕೊರವಂಜಿಯು ಕಣ್ಣೀರಿಟ್ಟಳು.

*　　*　　*　　*

ಶ್ರೀ ಸಾದಿಕ್ ಅವರು ಭಕ್ಷಿ ಗುಲಾಂ ಅಹಮ್ಮದರ ಅಪೇಕ್ಷೆಯಂತೆ ಕಾಶ್ಮೀರದ ಮುಖ್ಯ ಮಂತ್ರಿ ಪದವಿಯನ್ನು ಒಪ್ಪಿಕೊಂಡರಂತೆ.

—ರಾಯಗೆ ರಾಜ್ಯವಾದರೆ ರಾಗೀ ಬೀಸೋದು ತಪ್ಪೀತೆ ಅಂತ ಕಾಶ್ಮೀರದ ಪ್ರಜೆ ಕೇಳಿದನೆಂಬುದು ಸುಳ್ಳು—ಏಕೆ ಅಂದರೆ ಅಲ್ಲಿ ರಾಗಿ ಸಿಗುಲ್ಲ.

ಟೆಸ್ಟ್

(ಪು. ತಿ. ನ. ಅವರ ಕ್ಷಮೆ ಬೇಡಿ)

ಏಳು ಘಂಟೆ ಎಂಟರೊಳಗೆ
ಸ್ಟೇಡಿಯಂ ತುಂಬುವೊಳಗೆ
ಇಂದು ಕ್ರಿಕೆಟ್ ಭಕ್ತ ಜನವ
ಮುದದಿ ಕೂಡಿ ನಲಿದು ನಡೆವ
    ಇಂದು ಟೆಸ್ಟು ಬನ್ನಿರೋ
    ಹೊಸ ಹುರುಪನು ತುಂಬಿರೋ

ಬೈನಾಕ್ಯುಲರು ಕಾಫಿ ಫ್ಲಾಸ್ಕು
    ಕಳ್ಳೇಕಾಯಿ ತನ್ನಿರಣ್ಣ
ಪ್ಯಾಂಟು ಬಿಗಿದುಕಟ್ಟಿ-ಶಿರಕೆ
ಪನಾಮಾವ ಕವುಚಿರಣ್ಣ
    ಹಲೋ ಲೋ ಟೆಸ್ಟಿದು
    ಹರುಷಕೋ Must ಇದು

ಕಾಲೇಜನ್ನು ಮರೆಯಿರಿ
ಸ್ಕೋರನೊಂದೆ ನೆನೆಯಿರಿ
ಮಿಸ್ಸಾದ ಕ್ಲಾಸಿಗೊಂದೆ
ಕಣ್ಣ ಹನಿಯ ಸುರಿಸಿರೈ
    ಮುಪ್ಪು ಹರೆಯ ಮರೆಯುತ
    ಜಾಣಕೋಣ ಬೆರೆಯುತ
    ಬ್ಯಾಟು ಬಾಲು ವಿಕೆಟ್ ನೋಡಿ
    ನೋಡಿ ಮೈಯ ಮರೆಯಿರಿ

ಕಚೇರಿ ಡ್ಯೂಟಿ ಮರೆಯಿರಣ್ಣ
C. L. ಅರ್ಜಿ ತೋರಿರಣ್ಣ
ಐದು ಹಗಲು ಮೆರೆಯಿರಣ್ಣ
ಕೆಲಸಕೆ ಡ್ಯಾಮೆನ್ನಿರಣ್ಣ
        ಲೋಕವೆಲ್ಲ ಮರೆಯುವ
        ಟೆಸ್ಟೊಳೈಕ್ಯವಾಗುವ
        ಎಂದು ಚಾಕಲೇಟ ಸವಿದು
        ಕಳ್ಳೆಕಾಯಿ ಮೆಲ್ಲಿರಣ್ಣ

ಕಿರಿಯರ ಹುರಿದುಂಬಿಸಿ
" ಹೌ ಈ ಸಾಟ್ " ಗುಮ್ಮಿಸಿ
ಬ್ಯಾರಿ ನೈಟ, ಮೈಕಸ್ಮಿತ್ತ
ಕಾಡ್ರಿ ಪ್ರೈಸ ಪಾರಫಿಟ್ಟ
ಬೊಲಸ ಬಿಂಕ್ಸ ಟಿಟ್ಮಸ
ಸರ್ದೇಸಾಯಿ ನಾಡಕರ್ಣಿ
ಚಂದು ಬುರುಡೆ ಆ ಪಟೋದ
ದುರಾನಿ ಮಾಂಜರೇಕರ
ಕುಂದ್ರನ್ ಚಂದ್ರ ಶೇಖರ
ಜೇಸಿಮ್ಮ ವಿಜಯಮೋಹರ
ತಂತಿಕಂಬ ಲಾರ್ಟರ
ಕಂಡು ಕಣ್ಣ ಕಣೆಸಿರೈ
ಕಿರಚಿ ಗಂಟಲೊಣಗಲ್ಲೈ
ಕ್ಲಾಸು ಕಚೇರಿ ಮರೆಯಿರಣ್ಣ
ಸ್ಟೇಡಿಯಮೊಂದೇ ನೆನೆಯಿರಣ್ಣ
        ವರುಷಕೊಂದು ಟೆಸ್ಟಿದು
        ಹರುಷಕೊಂದು Must ಇದು!

—ರಾಮಿ.

ಮತ್ತೆ ಸ್ಕೋಡಾ !

——:o:——

ಬರವಣಿಗೆಯ ಹತ್ತು ವರ್ಷಗಳ ಕೊನೆಗೆ ಲೇಖಕ ಕವಲು ದಾರಿಯಲ್ಲಿ ನಿಲ್ಲುತ್ತಾನಂತೆ. ಅಲ್ಲಿಗೆ ಪ್ರಾಮಾಣಿಕತೆಯಿಂದ ಕೈ ಬಿಡದಿದ್ದರೆ, ಅಲ್ಲಿಂದ ಮುಂದೆ ಹೇಳಿದ್ದನ್ನೇ ಹೇಳಬೇಕಾಗುತ್ತದಂತೆ. ಇತ್ತೀಚೆಗೆ ಕೆಲವು Spectacular failure ಗಳನ್ನು ಅನುಭವಿಸಿದ ನಾವು ಪ್ರಾಮಾಣಿಕತೆಯನ್ನು ತೋರಿಸಿ ಕೈ ಮುಗಿಯಬೇಕೆಂದಿದ್ದೆವು. ಆದರೆ ಮನಃಪಟಲದಲ್ಲಿ ನವನವೋದಿತ ಯಾತನೆಗಳು ಸುಳಿಯುತ್ತಿದ್ದುದರಿಂದ ಮುಂದುಗೆಟ್ಟು ಕೈ ಮುಗಿಯಲಿಲ್ಲ

ಅಷ್ಟು ಹೊತ್ತಿಗೆ ವೀರ ಗೀತೆಗಳು ನಮ್ಮ ಸಾಹಿತ್ಯದ ಪ್ರಮುಖ ಹೊಸ ಹೆಜ್ಜೆಗಳೆಂದು ಖ್ಯಾತನಾಮರಾದ ಕವಿಗಳೊಬ್ಬರು ಹೇಳಿದುದರಿಂದಲೂ, ನಮಗೆ ತಿಳಿದಂತೆ ಶುದ್ಧ ಕಂತ್ರಿಗಳಾದ ಕೆಲವರು ಕಾವ್ಯ ಮೀಮಾಂಸೆಯಲ್ಲಿ ರಚನೆಯಲ್ಲಿ ಖ್ಯಾತನಾಮರಾಗುವತ್ತ ಹೆಜ್ಜೆಗಳನ್ನಿಟ್ಟುದರಿಂದಲೂ, ನಾವು ಕೈ ಮುಗಿಯಲು ಹಿಂಜರಿದೆವು. ಅಲ್ಲದೆ, ನಾವೂ ಬರೆಯುವುದನ್ನು ಬಿಟ್ಟಲ್ಲಿ, ಎಲ್ಲ ಪತ್ರಿಕೆಗಳ ಎಲ್ಲ ಕತೆ, ಕಾದಂಬರಿ ಕವನಗಳೂ, ಹಿಂದಿ, ತಮಿಳುಗಳ ಭಾಷಾಂತರ, ತಪ್ಪಿದರೆ ಇಂಗ್ಲೀಷಿನ ರೂಪಾಂತರಗಳಾಗಿ ಬಿಟ್ಟಾವಲ್ಲಾ ಎಂಬ ಕಳವಳವೂ ಆರಂಭವಾಯಿತು.

ಯಥಾ ಪ್ರಕಾರ ಮನೋರಂಜನೆಗೆಂದು ಸ್ಕೋಡಾರವರ "ಇನ್‌ಫರ್ನ್ಮಂ ಲೇಬೆಲ್ಲೆಸ್ ಲೆಟ್ರೆಸ್" ಎಂದೋ ಏನೋ ಉಚ್ಚರಿಸಬೇಕಾದ ಹೆಸರನ್ನುಳ್ಳ ಗ್ರಂಥ ವಾಚನೆಗೆ ತೊಡಗಿದೆವು

ಸ್ಕೋಡಾರವರು ತಮ್ಮ, ಎಂದಿನ ದಾಟಿಯಲ್ಲಿ Mediocrity is the hallmark of greatness (the alleged)

one need not be a great Poet-all one wants is to see that he is called great.

ಎಂಬಿತ್ಯಾದಿ ಮುಕ್ತಾಫಲಗಳನ್ನು ಬರೆಯುತ್ತಾ ನನ್ನ ಮನರಂಜನೆ ಮಾಡುತ್ತಿರುವಲ್ಲಿ ಕೋಣೆಯ ಕದ ತಟ್ಟಿದ ಸದ್ದಾಯಿತು ಬಾಗಿಲು ತೆರೆದು ಒಳಗೆ ಬಂದವರು: (ಅನುಕ್ರಮವಾಗಿ) Prof. ಅಶೋಕ್, Miss ಮಾಟ್ಸುಮಿ ಖಜುರಾಹೋಕಿಯಾಕಿ, Prof. ಮಾಲ್ವಿನ್ ಮತ್ತು (the one and the only) ಸ್ಕೋಡಾ ಟ್ರಾಂಡಡೂರ್ ರಾವುಲ್ ಫ಼ೀಸ್ಕ !

" of all the Persons ! ..."ಎಂದಾರಂಭಿಸಿದೆ

" ನೀವು ಕನ್ನಡ ಸಾಹಿತ್ಯ ಸಮ್ಮೇಳನಕ್ಕೆ ಬರಲಿಲ್ಲ !" ಎಂದರು ಮಾಟ್ಸುಮಿ

" ಯಾವ ಸಾಹಿತ್ಯ ಪ್ರೇಮಿ ತಾನೇ...." ಎಂದು ಸ್ಕೋಡಾ ಆರಂಭಿಸಿದರು.

Prof. ಅಶೋಕ್ ನಿರಾಶೆಯ ನಿಟ್ಟುಸಿರನ್ನು ಬಿಟ್ಟು

"ಹಾಗಾದರೆ ನೀವು ಇವರನ್ನು ಬಲ್ಲಿರಿ!" ಎಂದರು.

"unfortunately...." ಎಂದರು ಮುಟ್ಟುಸ್ವಾಮಿ.

"ನಾನು ಸಾಹಿತ್ಯರಂಗದಿಂದ ನಿರ್ಗಮಿಸಬೇಕೆಂದು ನಿರ್ಧರಿಸಿದ್ದೇನೆ."

"How nice it would be if..." ಎಂದಾರಂಭಿಸಿದರು Prof. Mollwin.

"ನೀವು ಇದ್ದರೂ ಯಾರೂ ಗಮನಿಸುವುದಿಲ್ಲ, ಬಿಟ್ಟರೂ ಅಷ್ಟೆ. ಆದುದರಿಂದ ಭಂಡತನದಿಂದ ಇದ್ದುಬಿಡಿ. ಆದರೆ ನಾಲ್ಕು ಕಾಸು ಮಾಡಿಕೊಳ್ಳಿ" ಎಂದರು ಸ್ಕೋಡಾ.

"ಪ್ರಾಮಾಣಿಕತೆಯಿಲ್ಲದಿದ್ದ ಮೇಲೆ ಬರೆಯಬೇಕೇಕೆ? ಹೇಳಬೇಕಾದದನ್ನು ಹೇಳಲು ಆಶೆಯಿಲ್ಲ. ಹೇಳಿ ಹೇಳಿ ಸಾಕಾಗಿ ಹೋದರೂ, ಕೇಳಿದರೂ ಕೇಳದಂತೆ, ಇರುವವರಿಗೆ ಹೇಳುವುದೇನನ್ನು?"

"Don't give yourself airs" ಎಂದರು Prof. ಅಶೋಕ್.

"Go on saying something" ಎಂದರು Prof. ಮಾಲ್ವಿನ್.

"ಕನ್ನಡದಲ್ಲಿ ಉದಿಸಬೇಕಾಗಿದ್ದ ಮಹಾಕಾವ್ಯವೇಕೆ ಉದಿಸಲಿಲ್ಲ" ಎಂದರು ಮಿಸ್ ಮುಟ್ಟುಸ್ವಾಮಿ.

"ಮಹಾ ಕಾವ್ಯಗಳು ಉದಿಸುವುದಿರಲಿ, ಕಾವ್ಯ ಉದಿಸಿದೆಯೇ ಎಂಬುದೇ ಸಂದೇಹ" ಎಂದರು ಸ್ಕೋಡಾ.

"which brings us to....ಕಾವ್ಯವೆಂದರೇನು?" ಎಂದು ಕೇಳಿದೆ ನಾನು.

"ನಾನು ಖಚಿತವಾಗಿ ಹೇಳಲಾರೆ. ಈಗ ಬರೆಯಲ್ಪಡುವ ಪದ್ಯಗಳು ಕಾವ್ಯಗಳಲ್ಲ." ಎಂದರು ಸ್ಕೋಡಾ.

ನಾನು – ನೇತಿ ನೇತಿ....ಥೀಂ ಅಲ್ಲವೇ.

ಸ್ಕೋಡಾ—ಹೇಳಲು ಏನಾದರೂ ಇರಬೇಕಲ್ಲ. ಇದ್ದುದನ್ನೇ ಹೇಳುವ ರೀತಿ ತಿಳಿದಿರಬೇಕಲ್ಲ.

ಮುಟ್ಟುಸ್ವಾಮಿ—ರೀತಿ ತಿಳಿದಿದೆಯಲ್ಲ?

ಸ್ಕೋಡಾ—ಅದು ರೀತಿಯೇ ಎಂಬ ಸಂದೇಹ!

Prof. ಮಾಲ್ವಿನ್—ನವ್ಯ, ರೊಮ್ಯಾಂಟಿಕ್....

ಸ್ಕೋಡಾ – Damn it all! ಕಾವ್ಯ

ನಾನು – ವಸ್ತುವೇನೋ ಇದೆಯಂತೆ. ಆದರದರ ಪ್ರಚೋದನೆ....

ಸ್ಕೋಡಾ—Damn nonsense

ಅಶೋಕ್—ನೇತಿ ಥೀಂ ಆದಮೇಲೆ, ನೀವು ಡ್ಯಾಂ ಮೋಟಿಫ್ ಉಪಯೋಗಿಸುತ್ತಿರುವಿರಲ್ಲ.

ನಾನು—ಮನಸು ಬರಡು ; ಬಾಳು ಕನ್‌ಫ್ಯೂಸಿಂಗ್. ಧ್ಯೇಯ ಅಸ್ಪಷ್ಟ; ಧ್ಯಾನ nil ಇವರಿಗೆ.

ಸ್ಕೋಡಾ—ಪ್ರಾಮಾಣಿಕತೆ absent.

ಮಟ್ಟೂಮಿ—ಅದು ಇದೆಯೆಂದು ಹೇಳುತ್ತಿರುವರಲ್ಲಾ.


ಸ್ಕೋಡಾ—ಅದರ ಇರವಿನ ಬಗೆಗೆ ಸಂಶಯವಿದೆ. ಲಕ್ಷಣಗಳೇ ಲಕ್ಷ್ಯವಾಗಿ ಬಿಟ್ಟು ಇದ ಮಿತ್ಥಂ ಎಂದು ಹೇಳುವುದು ಮಾನಸಿಕ ದಿವಾಳಿಯ ಗುರುತು.

Prof. ಅಶೋಕ್—ಹಾಗಾದರೆ ಏನು ಮಾಡಬೇಕು ?

ಸ್ಕೋಡಾ—ಏನನ್ನು ಬೇಕಾದರೂ, But Spare us !

ನಾನು—ದಯೆಯಿಟ್ಟು ನೀವೆಲ್ಲಾ ಕುಳಿತುಕೊಳ್ಳಿ, ಒಂದೊಂದು ಲೋಟಾ ಕಾಫಿ ಕುಡಿಯಿರಿ. ಕಾವ್ಯದಂತೇ ನಮ್ಮ ಸಂಭಾಷಣೆ Dead end ಮುಟ್ಟಿದೆ. ಕೆಲಕಾಲದ ನಂತರ ಮತ್ತೆ ಪ್ರಯತ್ನಿಸೋಣ.

—ಅ. ರಾ. ಸೇ.



" ನಾನು ಉಪವಾಸ ಸತ್ಯಾಗ್ರಹ ಮಾಡಬೇಕು ಅಂತ ಇದೀನಿ ಪಾನನಿರೋಧ ರದ್ದಾಗ್ಬೇಕು ಅಂತ "

ತಿಮ್ಮರಾಯಿ ತಿಮ್ಮಕ್ಕ

ಷಹರು ಗಂಜಾಂಪೇಟೆ ಉಸ್ತಾದ್ ಉಮರ್ ಖಾನನನ್ನು ಎರಡು ಪಟ್ಟಿನಲ್ಲಿ ಮಣ್ಣು ಮುಕ್ಕಿಸಿದ, ನಮ್ಮೂರ ಗರಡಿ ತಿಮ್ಮರಾಯಿ: ಢೋಭಿ ಪಟಕ್ ಹಾಕಿ ಅವನನ್ನೆತ್ತಿ ಒಗೆದ ಅಂತ ಪತ್ರಿಕೆಗಳಲ್ಲಿ ಸುದ್ದಿ ಪ್ರಕಟವಾದಾಗ, ನಮ್ಮ ಸಂಪಾದಕರು ಸುಗ್ರೀವಾಜ್ಞೆ ಇತ್ತರು: "ಬೇಗ ಹೋಗಿ ತಿಮ್ಮರಾಯಿಯನ್ನು ಭೇಟಿಯಾಗಿ, ಸ್ವಂತ ಜೀವನ, ವ್ಯಾಯಾಮ ಪದ್ಧತಿ, ಇತ್ಯಾದಿ ವಿವರಗಳನ್ನು ತಿಳಿದುಕೊಂಡು ರಸವತ್ತಾಗಿ ಒಂದು ಲೇಖನ ಬರಿ" ಅಂತ.

ಪೆನ್ಸಿಲ್ಲು ಕಾಗದ ಹಿಡಿದುಕೊಂಡು ತಿಮ್ಮರಾಯಿ ಗರಡಿಗೆ ಓಡಿದೆ. ಗರಡಿ ಮನೆಯ ಒಂದು ಮೂಲೆಯಲ್ಲಿ ಮುಕ್ಕಾಲು ಮಣೆಯಮೇಲೆ ತಿಮ್ಮರಾಯಿ ಕೂತಿದ್ದ ಎಲಡಿಕೆ ಅಗಿಯುತ್ತಾ "ಬನ್ನಿ ಸೋಮಿ; ಪೇಪರಿನೋರು ನೀವು; ಪೇಪರು ಓದಿದಮೇಲೆ ನನ್ನ ಭೆಟ್ಟಿಗೆ ಬಂದಿದ್ದೀರಿ, ಅಲ್ವಾ!" ಎಂದ.

ಎಲಾ ಇವನ; ಗರುಡಿಯೋರಿಗೆ ತಲೆ ಖಾಲಿ ಇರುತ್ತೆ ಎಂದು ಪ್ರತೀತಿ. ವಸ್ತಾದಿಗೆ ಮುಷ್ಟಿ ಮಾತ್ರ ಇರುತ್ತದೆಯೋ ಹೊರತು ಮಸ್ತಕವೆಲ್ಲಾ ಶೂನ್ಯ ಎಂದು ವೇದದಲ್ಲಿ ಕೂಡ ಹೇಳಿದೆ. ಹಾಗಿರೋವಾಗ, ಮೂವತ್ತರ ಹರೆಯದ ಈ ತಿಮ್ಮರಾಯಿ, ನನ್ನ ಮುಖ ಕಂಡು, ನಾನು ಬಂದ ಕಾರಣವನ್ನು ಸರಿಯಾಗಿ ಊಹಿಸಿ, ಜಾಣತನವನ್ನು ತೋರಿಸಿದನಲ್ಲಾ ಎಂದು ಆಶ್ಚರ್ಯಪಡುತ್ತಿದ್ದಾಗಲೇ

ಅವನು ಹತ್ತಿರದಲ್ಲಿದ್ದ ಒಂದು ಕಾಗದ ತೆಗೆದುಕೊಂಡು ನನಗೆ ಕೊಡುತ್ತಾ "ತೊಗೊಳ್ಳಿ ಸೋಮಿ! ನೀವು ಏನೇನು ವಿವರಗಳನ್ನು ಕೇಳಬೇಕು ಅಂತ ಅಂದುಕೊಂಡಿದ್ದೀರೋ ಅದನ್ನೆಲ್ಲಾ ಬರೆದು, ಅವಕ್ಕೆ ಉತ್ತರಗಳನ್ನೂ ಬರೆಸಿಟ್ಟಿದ್ದೀನಿ. ನಮ್ಮ ಗುರುಗಳು ಹೇಳಿದ್ದರು. "ಭಂಟಾ! ನೀನು ಜಿದ್ದಾಜಿದ್ದಿ ಕುಸ್ತಿಗೆ ಇಳಿಯುವುದಕ್ಕೆ ಮೊದಲೇ ಗೆಲ್ಲುತ್ತೇನೆ ಎಂದು ಧೃಡ ವಿಶ್ವಾಸವನ್ನು ಇಟ್ಟುಕೋ. ಗೆದ್ದಮೇಲೆ ಅಗುಳು ಮುತ್ತುಕ್ಕೆ ಇರುವೆಗಳು ಬಂದಂತೆ ಪೇಪರಿನವರು ಬರ್ತಾರೆ. ಅವರಿಗೆ ಕೊಡುವ ಉತ್ತರಗಳನ್ನೆಲ್ಲಾ ಕುಸ್ತಿಗೆ ಮುಂಚೆಯೇ ಬರೆದಿರಿಸಿರು. ಗೆದ್ದಮೇಲೆ ಬರೆಯುಕ್ಕೆ ಹೋಗಬೇಡ. ಬಹಳ ತ್ರಾಸಾಗ್ತದೆ. ಮೊದಲೇ ಬರೆಸಿಡುವುದಕ್ಕೆ ಪ್ರಯತ್ನಪಟ್ಟರೆ ಕುಸ್ತಿ ಹೊತ್ತಿಗೆ ಮನಸ್ಸಿಗೆ ಬೇಸರ ಬಂದಿರುತ್ತೆ. ಕುಸ್ತಿಯಲ್ಲಿ ಎದುರಾಳಿಯಮೇಲೆ ಬೇಸರವನ್ನು ತೀರಿಸಿಕೊಳ್ಳಬಹುದು." ಎಂದು.

ಅದಕ್ಕೇ ಎಲ್ಲ ವಿವರಗಳನ್ನೂ ಬರೆಸಿಟ್ಟಿದ್ದೇನೆ ತೊಗೊಳ್ಳಿ. ನಿಮಗೂ ಕಷ್ಟ ತಪ್ಪಿತು. ನನಗೂ ಸುಖ ಆಯ್ತು. ಈಗ ಊರ ಸಮಾಚಾರ ಹೇಳಿ ಏನೇನಾಗ್ತೈತೆ. ನಮ್ಮ ಮಂತ್ರಿಗಳಲ್ಲಿ ಯಾರು "ಚಾಕೋ"ದಾರಿ ಹಿಡೀತಾರೆ? ಏನಾರು ಸುದ್ದಿ ಹುಟ್ಟಿದೆಯಾ? ಹೊಸ ಪಾರ್ಟಿ ಕಟ್ತಾರಂತಲ್ಲ, ಅದಕ್ಕೆ ಯಾರ್‍ಯಾರು ಹಣ ಕೊಡ್ತಾರೆ ಏನಾರ ತಿಳಿಯೋದಾ? ತಾಫೆ ಲಕ್ಷ್ಮಿ ರಷ್ಯಾಕ್ಕೆ ಹೋಗ್ತಾಳೆ ಅಂತ ಹೇಳ್ತಿದ್ರಲ್ಲಾ! ದಿಟವಾ? ಎಂದು ಕೇಳಿದ.

ಕೊಟ್ಟ ಕಾಗದವನ್ನು ಜೇಬಿನಲ್ಲಿಟ್ಟುಕೊಂಡು, ಬರೆಯೋ ಗೋಳು ತಪ್ಪಿಸಿದ ನಲ್ಲಾ ಅಂತ ಮನಸ್ಸಿನಲ್ಲೇ ಧನ್ಯವಾದ ಹೇಳಿ, ನಂತರ ಅವನು ಕೇಳಿದ ಕಾಡಹರಟೆ ಪ್ರಶ್ನೆಗಳಿಗೆ ಊರ ಉತ್ತರಗಳನ್ನು ಉದ್ಭವಿಸಿಕೊಂಡು ಹೇಳಿದೆ.

ನಮ್ಮೂರ ಮಂತ್ರಿ ಮಂಡಲ ಭದ್ರ ಚಾಕೋ ತರಹ ಪೆಚ್ಚುಪೆಚ್ಚಾಗಿ ಯಾರೂ ಇಲ್ಲಿ ಸಿಕ್ಕಿಹಾಕಿಕೊಳ್ಳಲ್ಲ. ಯಾರೂ ವೋಟಾರು ಬಿಡೋದೇ ಇಲ್ಲ. ಬಿಡುಕ್ಕೆ ಬರೋದೂ ಇಲ್ಲ. ಹೊಸ ಪಾರ್ಟಿ ಕಟ್ಟುಕ್ಕೆ ಟೊಂಕ ಕಟ್ಟಿದವರು, ಟೊಂಕದ ಮೇಲಿಂದ ಕೈ ಇಳಿಸೇ ಇಲ್ಲ. ವಿಷ ಕನ್ಯೆಯರನ್ನು ತಯಾರುಮಾಡಿ, ಈಗ ಅಧಿಕಾರದಲ್ಲಿರೋರ ಬಳಿಗೆ ಕಳಿಸಿ ಬೀಳಿಸಬೇಕು ಅಂತ ಪ್ರಯತ್ನ ನಡೀತಿದೆ ಅಂತ ಕೇಳಿದೆ.

ತಾಫೆ ಲಕ್ಷ್ಮಿ ಹನುಮಂತರಾಯನ ಗುಡೀಲಿ ಕುಣಿದಾಗ, ಕೇಂದ್ರದ ಮಂತ್ರಿ ಗಳು ಹಾಜರಿದ್ದರಂತೆ. ಅವರೇ ಮೆಚ್ಚಿ ಕರಕೊಂಡು ಹೋಗಿ, ದಿಳ್ಳೀಲಿ ಸಾಂಸ್ಕೃತಿಕ ನಿಯೋಗಕ್ಕೆ ದಾಖಲ್ ಮಾಡಿಸಿದರಂತೆ. ಲಕ್ಷ್ಮೀಗೆ ತೊನ್ನು ಅಂತ ಆ ಮೇಲೆ ಅವರಿಗೆ ತಿಳಿಯಿತಂತೆ. ಆದರೂ ಹೋಗಿ ಬರಲಿ ಯಾರಿಗೂ ಕಾಣಿಸೋದಿಲ್ಲ ಅಂತ ನಿಶ್ಚಯಿಸಿದರಂತೆ.

ಎಂದು ಬುರುಡೆಬಿಟ್ಟೆ. ಸೋರೆ ಬುರುಡೆ ತುಂಬಾ ಸಾರಾಯಿ ತುಂಬಿ ತೇಲಿ ಬಿಟ್ಟ ಹಾಗೆ.

ಅಷ್ಟು ಹೊತ್ತಿಗೆ ಗರಡಿ ಗುಡಿಸುವ ತಿಮ್ಮಕ್ಕ ಬಂದಳು.

ಕಳೆದ ೨೦–೩೦ ವರ್ಷಗಳಿಂದ ಗರುಡಿಯನ್ನು ಬೆಳಿಗ್ಗೆ ಸಂಜೆ ಗುಡಿಸುವಾಕೆ, ತಿಮ್ಮಕ್ಕ. ಈಗ ಏನಿಲ್ಲ ಅಂದೂರೂ ಐವತ್ತರ ಪ್ರಾಯ ಗರಡಿಯಾಳುಗಳೆಲ್ಲಾ ಅವಳಿಗೆ ಚೆನ್ನಾಗಿ ಪರಿಚಯ ಹಾಗಾಗಿ ಸಲಿಗೆ ಹೆಚ್ಚು. ಬರುವಾಗಲೇ ಕಸಪರಕೆ ಯನ್ನು ಬಲಗೈಯ್ಯಲ್ಲ ಝುಳಪಿಸುತ್ತಾ, ಎಡಗೈಯಲ್ಲಿ ಗುರಾಣಿ ಹಿಡಿಯುವಂತೆ ಮೊರವನ್ನು ಹಿಡಿದು, ತಿಮ್ಮಕ್ಕ ಲೊಟಗುಟ್ಟುಕ್ಕೆ ಶುರು ಮಾಡಿದ್ದಳು.

" ಉಮ್ಮರ್ ಸಾಬೀನ ಸೋಲಿಸಿಬಿಟ್ಟೆ ಅಂತ ಕೊಚ್ಚುಕೋತಾ ಇದೀಯಲ್ಲಾ, ಉಮ್ಮರ್ ಸಾಬಿ ಅಂಗಾಲಿನಲ್ಲಿ ಆಣಿ ಬೆಳೆದಿದೆ. ಅದನ್ನ ಹಿಡಿದು ಅಮುಕು ಅಂತ ನಾನೇ ಅಲ್ವ ನಿಂಗೆ ಹೇಳಿಕೊಟ್ಟಿದ್ದು. ಹಾಗೆ ಅಮುಕಿದರೆ ಅವ ಕೈ ಕಾಲು ಝಾಡಿಸುತ್ತಾ ಕೆಳಗೆ ಬೀಳ್ತಾನೆ ಅಂತ ಕೂಡ ಹೇಳಿರಲಿಲ್ವಾ!"

ಎಂದು ತಿಮ್ಮರಾಯಿಯಾನ ಉದ್ದೇಶಿಸಿ, ದುಡ್ಡಿನ ಅತ್ತೆ ಬಡ ಅಳಿಯನ್ನ ಹಂಗಿಸುವ ದನಿಯಲ್ಲಿ, ದಬಾಯಿಸಿದಳು.

ತಿಮ್ಮಕ್ಕನ ಮಾತು ಕೇಳುಕ್ಕೆ ಚೆಂದ ಅಲ್ವಾ ಸೋಮಿಯೋರಾ! ಎಂದು ತಿಮ್ಮರಾಯಿ ಹೇಳಿದ. ದಿಟ ಇರಬಹುದೇನೋ ಎಂದೆ ನಾನು. ತಿಮ್ಮಕ್ಕ ಹಾಗೆ ಹೇಳಿದ್ದೂ ಉಂಟು ನಾನು ಮಾಡಿದ್ದೂ ಉಂಟು. ಅದು ಆಗಿದ್ದೂ ಉಂಟು. ಆದರೂ ದೋಭಿ ಪಟಕ್ ಹಾಕ್ದಾಗ ಒರಲಿಕೊಂಡು ಬಿದ್ದ, ಎಂದ ತಿಮ್ಮರಾಯಿ.

ಗುಡಿಸ್ಬೇಕು ಏಳ್ಲಾ ಎಂದು ತಿಮ್ಮಕ್ಕ ಸರಸರ ಗುಡಿಸುಕ್ಕೆ ಶುರು ಮಾಡಿದಳು. ತಿಮ್ಮರಾಯಿ ಕೂತೇ ಇದ್ದ. ಎದ್ದ ಧೂಳಿನ ಹೊಡೆತ ತಡೆಯಲಾರದೆ ನಾನು ಬಾಗಿಲಬಳಿಗೆ ಹೋದೆ.

ಗುಡಿಸ್ತಾ ಗುಡಿಸ್ತಾ ತಿಮ್ಮರಾಯಿ ಬಳಿಗೆ ತಿಮ್ಮಕ್ಕ ಹೋದಳು. ಮೊರವನ್ನು ಕೆಳಗಿಟ್ಟು, ಎಡಗೈಯಲ್ಲಿ ತಿಮ್ಮರಾಯಿ ಕೂತಿದ್ದ ಮುಕ್ಕಾಲು ಮಣೆಯನ್ನು ಅನಾಮತ್ತು ಎತ್ತಿ ಹಿಡಿದು, ಕೆಳಗೆಲ್ಲಾ ಗುಡಿಸಿ, ಆ ಮೇಲೆ ಮಣೆಯನ್ನು ಕುಕ್ಕಿದಳು! ತಿಮ್ಮರಾಯಿ ನಗ್ತಾ ಇದ್ದ.

ತಿಮ್ಮರಾಯಿ ಬರೆದುಕೊಟ್ಟಿದ್ದನ್ನು ನಮ್ಮ ಸಂಪಾದಕರಿಗೆ ಕಳಿಸಿದೆ. ನಾನು ನಾನು ಕಂಡಿದ್ದನ್ನು ಈ ಪತ್ರಿಕೆಗೆ ಬರೆದು ಕಳಿಸಿದೆ.

—ಪ್ರಕಾಶ್.

ರಾಯಚೂರಿನ ಬಳಿ ಇದನಪುರದಲ್ಲಿ ಕಳೆದ ಕೆಲವು ವಾರಗಳಿಂದಲೂ
ಕಾಮನ ಹಬ್ಬವನ್ನು ಬಿರಿದ ಬಾಯಿಂದ ಆಚರಿಸುತ್ತಿದ್ದಾರಂತೆ.
ಕಾಮ ಕ್ರೋಧದ ವಿರಾಟ್ ಸ್ವರೂಪ!!

* * * *

ನಮ್ಮ ರಾಜ್ಯದ ಹಾಗೂ ಕೇಂದ್ರದ ಕೊರೆಯುವ ಬಡ್ಜೆಟ್‌ಗಳು ಹೊರಬಿದ್ದ ಮೇಲೆ ಈ ಸಂಚಿಕೆ ನಿಮ್ಮ ಕೈ ಸೇರುವುದರಿಂದ

—ಇದ ನೋವು ಸಂತಾಪಗಳು ಹೆಚ್ಚು ಆಗುತ್ತದೋ ಕಡಮೆ ಆಗುತ್ತದೋ ಹೇಳಬರುವುದಿಲ್ಲ ಎಂದೊಬ್ಬರು ಟೀಕಿಸಿದ್ದಾರೆ.

ನೂರು ಚಿತ್ರಗಳು

ಹಿಂದಿನ ರಾತ್ರಿ, ತಾನೊಪ್ಪಿಕೊಂಡಿದ್ದಂತೆ, ಹನುಮ ನೂರು ರೂಪಾಯಿಗಳನ್ನು ತನ್ನ ಗುರುವಿನ ಹಸ್ತಕಮಲದಲ್ಲಿ ಮಡಗಿ, ಆಶೀರ್ವಾದ ಪಡೆದು, ಮನೆಗೆ ಹಿಂತಿರುಗಿ ಬಂದು ಮಲಗಿದಾಗ, ಎಂದೂ ಬಾರದ ಕನಸುಗಳು ಬಂದು ಕಂಡಾಪಟ್ಟೆ ಕಾಡಹತ್ತಿದವು. ಅವನ ಇಡೀ ಭವಿಷ್ಯವೇ ಕನಸುಗಳಾಗಿ ಬಂದು ಝಾಡಿಸಿ ಒದೆಯತೊಡಗಿದವು. ಸುಖದ ಪರಮಾವಧಿಯನ್ನು ಮುಟ್ಟಿದ ಹನುಮ, ಕೇವಲ ಒಂದೆರಡು ಬಾರಿ ಮಾತ್ರ "ಯಾಹ್ಹೂ...." ಎಂದದ್ದುಂಟು. ಅದೇ ಸಮಯದಲ್ಲಿ ಅಲ್ಲಿ ಅಲೆಯುತ್ತಿದ್ದ ಕೆಲವು ದೆವ್ವಗಳು, ಆ ಮಧುರ ಕಂಠಧ್ವನಿಯಾಲಿಸಿ, ತಮ್ಮ ದಾರಿತಪ್ಪಿ ಓಡಿದ್ದೂ ಉಂಟು.

ಹನುಮಾ ಉದ್ದವಾದ ಕಾರನ್ನು ಚಲಿಸುತ್ತಾ ಕುಂಟೇಮಾರ್ನ ಹಳ್ಳಿಯ ಮೇಯಿನ್ ಓಣಿಯಲ್ಲಿ ಮಗುಮ್ಮಾಗಿ ಹೋಗುತ್ತಿದ್ದ ಹಾಗೂ, ಪಕ್ಕದಲ್ಲಿ ಕುಳಿತಿದ್ದ ಈರೊಯಿನ್ ಮಾತನಾಡುತ್ತಾ ಆಗಾಗ್ಗೆ ನಗುತ್ತಿದ್ದ ಹಾಗೂ, ರಸ್ತೆಯ ಇಬ್ಬದಿಯಲ್ಲೂ ಸಾಲಾಗಿದ್ದ "ಬೋರ್ಡ್ಸ್"ಗಳಲ್ಲಿ ಅವರ ಚಿತ್ರಗಳು ಮೆರೆಯುತ್ತಿದ್ದ ಹಾಗೂ ಅಂತರಿಕ್ಷದಲ್ಲಿ ದೇವ-ಗಂಧರ್ವರು ನೆರೆದು "ಹನುಮ ಕುಮಾರಕೂ ಜೈ....ಮೋಯಿನೀಕೂ ಜೈ" ಮುಂತಾಗಿ ಜಯಕಾರಮಾಡುತ್ತಾ ಪುಷ್ಪವೃಷ್ಟಿ ಮಾಡುತ್ತಿದ್ದ ಹಾಗೂ ಒಂದು ಕನಸಾದರೆ,

ಭವ್ಯವಾದ ವಿವಾಹ ಮಂಟಪದಲ್ಲಿ ಅವರಿಬ್ಬರೂ ಅಕ್ಕಪಕ್ಕದಲ್ಲಿ ಮದು ಮಗ-ಮಗಳಾಗಿ ಕುಳಿತಿದ್ದ ಹಾಗೂ, ಅವನ ನೆಚ್ಚಿನ ಗುರು ಯಣ ಮಂತ್ರಗಳನ್ನು ಪಟಪಟಿಸುತ್ತಾ ಮಧ್ಯೆ,

"ಸಿಸ್ಯಾ ಅನುಮೂ ಇದೇ ಸಮಯದಾಗೆ ನಿನಗೆ ಹನುಮಕುಮಾರ ಅಂಬೊ ನಾಮಕರಣ ಮಾಡ್ತಿನ್ನಿ. ಉಸಾರು ಗೆಪ್ತಿ ಮಡಕ್ಕೊ" ಎಂದ ಹಾಗೂ.... ಅಯ್ಯೋ ಕನಸುಗಳಿಗೇನು ಒಂದೇ ಎರಡೇ. ಆ ರಾತ್ರಿ ಹನುಮನಿಗೆ ಖುಷಿಯೊ ಖುಷಿ.

ಆದರೆ ಬೆಳಗಾದಾಗ ಅವನಿಗೆ ಕೆಟ್ಟ ಸುದ್ದಿ ಕಾದಿತ್ತು ಬೋ ಕೆಟ್ಟ ಸುದ್ದಿ. ಹನುಮ ಕುಮಾರ ಒಂದು ಬಾರಿ ಗಟ್ಟಿಯಾಗಿ " ಹಾ ಮೋಯಿನಿ " ಎಂದು ಚೀರಿ,

ಶಿವ್ಯಾ ಕರ್ಪೂರನಂತೆ ಮುಖ ಮಾಡಿ ಮಂಚದ ಮೇಲೆ ಧೊಪ್ಪನೆ ಉರುಳಿದ ಮೂರ್ಛಿತನಾಗಿ. ತಿಳಿವು ಬಂದ ಮೇಲೆ "ಮೋಯಿನಿ" ಎಂದು ಚೀರುವುದನ್ನು Continue ಮಾಡುತ್ತಾ, ಮೂರು ಗಳಿಗೆ ದುಃಖಿಸಿದ.

ಮೂರೇ ಗಳಿಗೆಗಳು ...ಮೂರೇ ಗಳಿಗೆಗಳಲ್ಲಿ ಅವನು ಮುದಿಯನಾದ ದುಃಖ ದಿಂದ. ಇನ್ನೂ ಒಂದು ಸಿಂಗಲ್ ಚಾ ಕೂಡ ಸುರಿಯದ ಅವನ ಹೊಟ್ಟೆ ಲಬೋ ಲಬೊ ಮಾಡ ತೊಡಗಿದಾಗ ಹನುಮನಿಗೆ ವೈರಾಗ್ಯ ಭಾವ ಬರತೊಡಗಿ ಅವನು ನಿಟ್ಟುಸಿರು ಬಿಡುತ್ತಾ ಏನೇನೋ ಚಡಪಡಿಸತೊಡಗಿದ.

"ಜೀವಣ ಎಂದರೆ ಯಾಪಾರ ಇದ್ದಂಗೆ ...ಒಂದು ದಿನ ಸುಖ ಒಂದೂವರೆ ದಿನ ದುಃಖ ಒಟ್ನಾಗೆ ಲವ್ವು ಭೋ ಕೆಟ್ಟದ್ದು."

* * * *

ಆ ಬೆಳಿಗ್ಗೆ ಈರೋಯ್ಯಿನ ಮನೆಯ ಮುಂದೆ ಗುಂಪೋ ಗುಂಪು. ಗಂಡಸರು, ಹೆಂಗಸರು, ಅವರು–ಇವರು ಎಲ್ಲಾ ಕೂಡಿದ್ದರು. ಸೇರಿದ್ದವರಲ್ಲಿ ಬಹಳ ಮಂದಿ ಬಹಳ ಹೊತ್ತಿನಿಂದ ಬಹಳ ವಿಧವಾಗಿ ಬಹಳ ಬಹಳ ಮಾತನಾಡುತ್ತಿದ್ದರು (ಅವರಲ್ಲಿ ಭಾವಿ ಮಂತ್ರಿಗಳು ಅನೇಕರಿದ್ದರು) ಕೆಲವರು ಮಾತ್ರ, ಬೇವಾರ್ಸಿಗಳಂತೆ ಹೇಳಿದ್ದನ್ನೆಲ್ಲಾ ಕೇಳುತ್ತಿದ್ದರು.

ಕೆಲವರು ಕುಳಿತಿದ್ದರು. ಕೆಲವರು ನಿಂತಿದ್ದರು. ಕೆಲವರು ಎಲೆಯಡಿಕೆ ಅಗಿಯುತ್ತಿದ್ದರು. ಕೆಲವರು ಉಗಿಯುತ್ತಿದ್ದರು. ಕೆಲವರು ಮೂತಿ ಒರೆಸಿಕೊಳ್ಳುತ್ತಿದ್ದರು. ಕೆಲವರು ಆಶ್ಚರ್ಯ, ಗಾಬರಿಗಳಿಂದ ಬಾಯಿ ತೆರೆದಿದ್ದರು. ಸೊಳ್ಳೆಗಳ ಹಿಂಡು ಧಾರಾಳವಾಗಿ ಒಳಗೆ ನುಗ್ಗುತ್ತಿತ್ತು. ಎಲ್ಲರ ಮುಖಗಳಲ್ಲಿಯೂ ಯಾಕೆ, ಏನಾಯ್ತು, ಎಪ್ಪಡಿ ಮುಂತಾದ ಪ್ರಶ್ನೆಗಳು ಎದ್ದು ನಿಂತಿದ್ದವು.

"ಏನಾಗಿತ್ತು?"

"ಅಯ್ಯೋ ಪಾಪ"

"ಯಾಕೆ 'ಪಾಪ'?!"

"ಗೊತ್ತಿಲ್ಲ!"

"ನಿನ್ನೆ ತಾನೆ ಬಾವಿ ತಾವ ನೋಡಿದ್ದೆನಲ್ಲಪೊ...." ಎಂದ ಒಬ್ಬ.

"ಕಲ್ಗುಂಡು ಇದ್ದಂಗೆ ಇದ್ಲಲ್ಲಪೊ .. ಅಯ್ಯೊ...." ಎಂದಳು ಒಬ್ಬಳು.

"ಅಪರಂಜಿ ಅಂತಾವಳು....ಅಯ್ಯೊ ಪಾಪ" ಎಂದರು ಯಾರೊ.

"ಬಾವೀ ಒಳಗೆ ನೋಡಿದ್ಯಾ?"

"ಉಂ· ನೀರಿತ್ತು"

"ಥೂ ನಿನ್ನ ಬುದ್ದೀಗ್..."

ಅಂತೂ ಮಾತನಾಡುವವರು ಮಾತನಾಡುತ್ತಲೇ ಇದ್ದರು. ಈರೊಯಿನ್‌ನ ಮನೆಯ ಬಾಗಿಲು ತೆರೆದದ್ದು ಹಾಗೆಯೇ ಇತ್ತು.

* * *

ಕೆಲವು ದಿನಗಳು ಉರುಳಿದುವು.

ಹನುಮ ಕುಮಾರನ ಹಟ್ಟಿಯ ಬಾಗಿಲನ್ನು ಯಾರೋ ಬಡಿದರು. ಅವನು ತೆಗೆಯುವ ಮುಂಚೆಯೇ ಮುಷ್ಟಿಯಿಂದಲೇ ಬಾಗಿಲನ್ನು ಮುರಿದು, ಮುಂಗೈಯಲ್ಲೊಂದು ಪೇಪರು ಹಿಡಿದು, ಮುಂದೆ ನುಗ್ಗಿ ಬಂದು ನಿಂತಿದ್ದ ಈರೊ ಪ್ರದೀಪ್ ಕುಮಾರ ಹನುಮ ಕುಮಾರನನ್ನು ಕಂಡು "ಹಹ್ಹ....ಹಾ" ಎಂದ.

ಈರೋವನ್ನು ಕಂಡಕೂಡಲೆ ಅವನಿಗೆ ತಾನು ವಿಲನ್ ಎಂಬುದು ನೆನಪಾಯಿತು. ಮತ್ತು ಆಶ್ಚರ್ಯವೂ ಆಯಿತು ಈರೋಯಿನ್‌ನನು ತಾನು ಒಂದು ವೇಳೆ ಪಾತಾಳಗೃಹದಲ್ಲಿ ಬಂಧಿಸಿದ್ದರೆ ಆಗ ಕತ್ತಿ ಹಿಡಿದು ಈ ಬಿಕನಾಸಿ ಬರಬೇಕಾಗಿತ್ತು. ಆದರೆ ಈಗ....

"ಲೋ ಅಲ್ಕ"

ಈರೋವಿನ ಪ್ರಥಮ ಸಂಬೋಧನೆಯಲ್ಲಿಯೇ ಸಾಕಷ್ಟು ಪ್ರೀತಿಯಿತ್ತು.

"ಯಾಕಲೇ ಉಳ್ಳಾಕಡ್ಡಿ!"

"ನಾಚಿಕೆಯಾಗಾಕಿಲ್ಲವಾ?"

"ಯಾಕೆ?"

"ನೀ ಮಾಡಿದ ಕೆಲ್ಸಕ್ಕೆ"

"ಏನ್ ಮಾಡಿದೆ?"

"ಏನಾ! ನೋಡಿಲ್ಲಿ"

ಹನುಮನ ಮುಂದೆ ಪೇಪರು ಹರಡಿದ. ಈರೋವಿಗೆ ಓದು ಬಾರದು ಎಂದು ನೆನಪಾಗಿ ಅವನೇ ಸುದ್ದಿಯನ್ನು ಓದತೊಡಗಿದ.

"ಇದೀಗ ಕನ್ನಡ ಚಿತ್ರರಂಗದಲ್ಲಿ ನವ ತಾರಾಶ್ರೀ ಯೊಬ್ಬಳ ಪ್ರವೇಶವಾಗಿರುವುದು ಸಂತೋಷದ ವಿಷಯ. ಸೌಂದರ್ಯ, ಸಂಸ್ಕೃತಿಗಳ ಪ್ರತಿರೂಪದಂತಿರುವ ಮೋಹನ ಕುಮಾರಿಯವರ ರಂಗಪ್ರವೇಶ ನಮ್ಮ ದೇಶಕ್ಕೆ ಒಂದು ಇದು. ಇವರಿಂದ ನಮ್ಮ ಭಾರತಕ್ಕೆ, ಅದೂ ಈ ಎಮರ್ಜನ್ಸಿಯಲ್ಲಿ, ಆಗ ಬೇಕಾದದ್ದು ಬಹಳ ಇದೆ."

"ಇವರ ಹುಟ್ಟಿದೂರು ಕುಂಟೇಮಾರ್‍ನಹಳ್ಳಿ, ಅದೊಂದು ನಿಸರ್ಗದ ಬೀಡು. ಆಹಾ! ಇವರ ತಂದೆ ತಾಯಿಗಳು ಹುಟ್ಟುಕ್ಕೆ ಮುಂಚೆಯೇ ಖತಂ. ಹೇಗೋ

ಹಳ್ಳಿಯಲ್ಲಿಯೇ ಬೆಳೆದ ಇವರಿಗೆ ಕನ್ನಡ, ತೆಲುಗು, ತಮಿಳು, ಹಿಂದಿ, ಇಂಗ್ಲೀಷ್ ಫ್ರೆಂಚ್, ಗಿಂಚ್, ಆಫ್ರಿಕ ಮುಂತಾದ ಅನೇಕ ಭಾಷೆಗಳು ಕರಗತವಾಗಿವೆ. ಹಿಂದಿಯೆಂದರೆ ಇವರಿಗೆ ಬಹಳ ಮೆಚ್ಚು ಕನ್ನಡವೆಂದರೆ ಹೇಳತೀರದು "

"ನಾಯಿಗಳೆಂದರೆ ಇವರಿಗೆ ಬಹಳ ಇಷ್ಟ. ಬೆಕ್ಕುಗಳೂ ಅಷ್ಟೆ. ಹಕ್ಕಿಗಳೆಂದರೆ ಬಹಳ ಇದು. ಇವರಿಗೆ ಸಂಸ್ಕೃತಿ ಬಹಳ ಇದೆ, ಕಲೆಗಾರಿಕೆಯೋ ಕಂಡಾಪಟ್ಟೆ ಚಿತ್ರ ಬರೆಯುವುದು, ತೋಟಗಾರಿಕೆ, ಕಸೂತಿ ಇವು ಇವರ ಮುಖ್ಯ ಹವ್ಯಾಸಗಳು"

"ಇಷ್ಟೆಲ್ಲಾ ಆದರೂ ಮೋಹನಕುಮಾರಿಯವರು ಬಹಳ ಸರಳ ಪ್ರಕೃತಿಯವರು. ಯಾರಿಗೆ ಬೇಕಾದರೂ ಆಟೋಗ್ರಾಫ್ ಕೊಡುತ್ತಾರೆ ..."

ಕೇಳುತ್ತಿದ್ದಂತೆ ಹನುಮ ಕುಮಾರನ ಕಣ್ಣುಗಳು ಅಗಲವಾದವು. ಮುಷ್ಟಿ ಬಿಗಿಯಾಯಿತು. ನಾಲಗೆ ಕಚ್ಚಿ ಅವನು

"ಥತ್ ಅಲ್ಕ ನನ್ನ ಮಗ" ಎಂಥ.

"ಯಾರು!"

"ಅವನೇ ಯಣ, ಅವನನ್ನ ಎಣ ಮಾಡ್ತೀನಿ."

ಅರ್ಥವಾಗದೆ ಕಣ್ಣು ಪಿಳಿಪಿಳಿಸಿದ. ಈರೋಗೆ ಹನುಮಕುಮಾರ ತನ್ನ ಕತೆಯನ್ನೆಲ್ಲಾ ಹೇಳಿದ. ಎಲ್ಲವನ್ನೂ ಕೇಳಿದ ಈರೋ ಮೋಹನ ಕುಮಾರಿ ತನ್ನಿಂದ ಹಿಂದಿನ ದಿನ ಒಂದಷ್ಟು ನೂರು ರೂಪಾಯಿ ತೆಗೆದುಕೊಂಡು ಹೋದದನ್ನು ಹೇಳಿ ನಿಟ್ಟುಸಿರು ಬಿಟ್ಟ.

ಎಲ್ಲರೂ ಆತ್ಮಹತ್ಯೆ ಮಾಡಿಕೊಂಡಿದ್ದಾಳೆಂದು ನಂಬಿದ್ದ ಈರೋಯಿನ್‌ನ ಚಿತ್ರ ಪತ್ರಿಕೆ ಪುಟದಲ್ಲಿ ನಗುತ್ತಿತ್ತು.

—ಎಲ್ಲೆನ್


"ಗಾಂಧೀಜಿ ಉಪವಾಸ ಸತ್ಯಾಗ್ರಹ ಮಾಡ್ತಾಗ ಇಡ್ಲಿ ಒಂದು ತಿನ್ಬಹುದು ಅಂತ ಹೇಳಿದ್ದಿದ್ರೆ ಎಷ್ಟು ಚೆನ್ನಾಗಿತ್ತು."

ಟೆಲಿಫೋನಿನಲ್ಲಿ

ಹೌದೇನೇ ರಂಗೂ! ದಿಟವೇನೇ!

....

ನಿನ್ನ ಗಂಡನಿಗೆ ತಿಳಿಯೋದೇನೇ? ಅವರು ಬೇಜಾರು ಪಟ್ಕೊಳ್ಳಲ್ವೇ?

....

ಹೋದ ವರುಷ ತಾನೆ ಒಂದು ಆಯ್ತು, ಅಲ್ಲವೇನೇ?

ಎಂಥ ಪುಣ್ಯವಂತೇನೇ,, ನೀನು, ಬೇಜಾರು ಪಡದೆ ಇರೋ ಗಂಡನ್ನ ಪಡೆಯೋಕ್ಕೆ. ತುಂಬಾ ಸಂತೋಷವಮ್ಮ.

... .

ಆ್ಞಾ; ಇಲ್ಲವಮ್ಮಾ ಇಲ್ಲ ನನಗೇನೂ ಹೊಟ್ಟೆಕಿಚ್ಚಿಲ್ಲ. ತಿರುಗಿ ಅದನ್ನೆಲ್ಲಾ ಇಷ್ಟು ಬೇಗ ಅನುಭವಿಸುಕ್ಕೆ ನಾನು ಸಿದ್ಧವಿಲ್ಲವಮ್ಮಾ! ಅಂದ ಮೇಲೆ ಹೊಟ್ಟೆಕಿಚ್ಚು ಯಾಕೆ?

....

ಏನಂದೆ? ಗಂಡ ಒಪ್ಪದೆ ಏನು ಮಾಡ್ತಾನೆ? ಅವನಿಗೇನು ಕಷ್ಟ, ಅನುಭವಿಸೋರು ನಾವು ಅಂದ್ಯಾ? ದಿಟ ಕಣೆ. ಆದರೂ ಎಲ್ಲಾ ಗಂಡಂದಿರೂ ಹಾಗೆ ಅಂತ ತಿಳಕೊಂಡು ತಪ್ಪಗಿರುಲ್ಲ ಕಣೆ. ತಲೆಯೆಲ್ಲಾ ಮಾತಾಡ್ತಾರೆ. ಕುಹಕ ಟೀಕೆಗಳ ಸುರಿಮಳೆಯನ್ನೇ ಸುರಿಸ್ತಾರೆ. ಗಂಡಸರ ನಾಲಿಗೆ ಗೊತ್ತಿಲ್ಲ. ಹಾಳು ಸಿಗರೇಟ್ ಸೇದಿ ಸೇದಿ ನಾಲಿಗೆ ತುದೀಲಿ ವಿಷವೇ ಇರುತ್ತೆ ಕಣೆ! ಅಂದ ಹಾಗೆ ಸುಮಾರು ಯಾವ ಹೊತ್ತಿಗೆ? ಏನಾದರೂ ಸಹಾಯ ಬೇಕಾದರೆ ಕೈನೆರವಾಗಿರೋಣ ಅಂತ ಕೇಳಿದೆ ಕಣೆ?

....

" ಮಕ್ಕಳಿಗೆ ಏನಾದರೂ ಸುಳು ಕೊಟ್ಟಿದ್ದಿಯೇನೇ?

....

ಒಳ್ಳೇ ಕೆಲಸ ಮಾಡಿದ ಮೊದಲೆ ಗೊತ್ತಾಗಿಬಿಟ್ರೆ, ಅರ್ಧ ಖುಷೀನೇ ಕಡಿಮೆಯಾಗಿ ಬಿಡುತ್ತೆ.

....

ಖಂಡಿತವಾಗಿ ಇಲ್ಲಮ್ಮಾ ನಮ್ಮ ಮನೆಯೋರಿಗೂ ಹೇಳುಲ್ಲ. ನಮ್ಮನೆ ಮಕ್ಕಳಿಗೂ ತಿಳಿಸೋದಿಲ್ಲ. ಕಡೇ ತನಕ ಗುಟ್ಟಾಗಿ ಇಟ್ಟುಕೋತೀನಮ್ಮ.

....

ಆ್ಞ ಏನಂದೆ? ಕೇಳಿಸೋದೇ ಇಲ್ಲ.

ಶಾಲೆಯಿಂದ ಮಕ್ಕಳು ಹಿಂತಿರುಗ್ತಾ ಇದ್ದಾರೆ. ಗೇಟಿನ ಹತ್ತಿರ ಅವರು ಮಾಡೋ ಗಲಾಟೆ ಇಲ್ಲಿಗೆ ಕೇಳಿಸ್ತಾ ಇದೆ.

....

ನಿಮ್ಮಗೇನೂ ಮಕ್ಕಳು ಬಂದರು ಅಂದ್ಯಾ. ಬೈ. ಬೈ.

* * * *

ಯಾರ ಹತ್ತಿರ ಮಾತಾಡ್ತಾ ಇದ್ದೇಮ್ಮ!

ಸಂಪಿಗೆ ಮರದ ಸಾತಕ್ಕನ ಮನೇಲಿ ಮುಂದಿನ ವಾರ "ಮಕ್ಕಳ ಕೂಟ" ಏರ್ಪಡಿಸ್ತಾರಂತೆ. ನೀವೆಲ್ಲ ಒಳ್ಳೆ ಹುಡುಗರಾಗಿದ್ದರೆ ಕರೆದುಕೊಂಡು ಹೋಗ್ತೀನಿ.

ಚಿತ್ರಗಾರ ಪುಟ್ಟುಸ್ವಾಮಿ
ಬಲು ಜಾಣ
ಆಸಾಮಿ
ರಂಭೆಯುವಳ ಹತ್ತು ಚಿತ್ರ
ಬರೆದು ಅವನು
ಇರಿಸಿದಾಗ
ಒಂದರಂತೆ ಒಂದು ಇದ್ದು
ಜನರ ಮನವ
ಸೆಳೆದುವು
ಮನೆಯು ತುಂಬ ಮಕ್ಕಳಿತ್ತು
ಹತ್ತು ಮತ್ತೊಂದು
ಒಂದರಂತೆ ಒಂದು ಇಲ್ಲ
ಒಂದರೊಳು ಕುಂದು ಇಲ್ಲ
ಒಂದು ಕೂಡ
ಅವನ ಮುಖವ ಹೋಲಿಕೊಂಡು ಇರಲೆ ಇಲ್ಲ!!

ತಾರಾ ಸಂದರ್ಶನ

ಇಸ್ಟಾರ್ ಚಿನ್ನಪ್ಪನವರ ಕಾಂಪೌಂಡ್ ಬಂಗ್ಲೆಯೊಳಕ್ಕೆ ನಾನು ಕಾಲಿಡುವುದಕ್ಕೂ, ಅವರು ರಾಯಲ್ ಡಿಸೋಟದಿಂದ ಕೆಳಗಿಳಿಯುವುದಕ್ಕೂ ಸರಿಯೋಯ್ತು.

" ತಾವು ಯಾರು? ಯಾಕೆ ಬಂದಿವ್ರಿ...?" ಅಂತ ಕೇಳಿದರು ಚಿನ್ನಪ್ಪ. ನಾನು ಮುಗುಮ್ಮಾಗಿ ವಿಸಿಟಿಂಗ್ ಕಾರ್ಡಿಗಾಗಿ ಜೋಬನ್ನೆಲ್ಲಾ ತಡಕಾಡಿದೆ. ಅವರು ಹತ್ತು ನಿಮಿಷ ಕಾದು ನೋಡಿ ನಂತರ ಹೇಳಿದರು.

" ಪರ್ವೇ ಇಲ್ಲಾ. ಸುಮ್ಕೆ ಬಾಯ್ನಾಗೆ ಏಳಿ. ಕಾರ್ಡಿಲ್ಲದಿದ್ದರೆ ಅಷ್ಟೇ ಒಯ್ತು."

" ನಾನು ಕೆಂಡ ಪತ್ರಿಕೆ ಸಂಪಾದಕ. ತಮ್ಮ ಸಂದರ್ಶನಕ್ಕೆ ಬಂದೆ" ಎಂದೆ.

" ಓ ...ಶಂಪಾದಕರೇ ಬನ್ನಿ ಬನ್ನಿ. ಲೇ ಮುರಿಗ್ಯಾ ಶಾಮಿಯೋರ್ನ ಡ್ರಾಯಿಂಗ್ ರೂಮ್ನಾಗೆ ಕುಂಡರ್ಸು" ಅಂತ ಹೇಳಿ ಸರಸರನೆ ಮನೆಯೊಳಗೆ ಹೊರಟು ಹೋದರು.

ಮುರಿಗ್ಯಾ ದೇಶಾ ವಿಶಾಲವಾಗಿದ್ದ ಡ್ರಾಯಿಂಗ್ ರೂಮಿನಲ್ಲಿ ಕೂಡಿಸಿದ. ಸೋಡಾ ಕೊಟ್ಟ, ರತ್ನಗಂಬಳಿಗಳೂ, ಗೋಡೆಗೆಲ್ಲಾ ಕ್ಯಾಲೆಂಡರುಗಳು, ಮೇಜಿನ ಮೇಲೆ ಚಲಚಿತ್ರ ಮಾಸಿಕಗಳು ನೂರೆಂಟು. ನನಗೆ ಹಜಾಮರ ಅಂಗಡಿಯು ನೆನಪಾಗುತ್ತಿತ್ತು.

ಅರ್ಧ ಘಟಿಂಯು ನಂತರ " ಮುರಿಗ್ಯಾ" ಅಂತ ಗುಟುರು ಹಾಕುತ್ತಾ ಚಿನ್ನಪ್ಪ ಪ್ರವೇಶಿಸಿದರು. ಕೈಯಲ್ಲಿ " 555" ರ ಒಂದು ಡಬ್ಬ ಮತ್ತು ಕಡ್ಡಿಪೆಟ್ಟಿಗೆ ರಾರಾಜಿಸುತ್ತಿತ್ತು. ಆರಡಿಯ ವಜ್ರಕಾಯಕ್ಕೆ ಅವರು ಉಡಿಸಿದ್ದು ಒಂದು ಪಟಾಪಟಿ ಬುಷ್ ಷರಟು, ಒಂದು ರಾಡಿ ರಂಗಿನ ಷರಾಯಿ, ತಲೆಯ ಕೂದಲನ್ನು ಮುಖದ ಮೇಲೆ ಚೆಲ್ಲಿಕೊಂಡು, ಕುಡಿದವರ ರೀತ್ಯಾ ಕಣ್ಣುಗಳಲ್ಲಿ ಕೆಂಡವನ್ನಿಟ್ಟುಕೊಂಡು, ಇಸ್ಟಾರ್ ಚಿನ್ನಪ್ಪ ಸೋಪಾದ ಮೇಲೆ ಕುಳಿತರು.

" ಕುಂಡ್ರಿ .. ಏನು ಕುಡೀತೀರಾ" ಎಂದು ಕೇಳಿದರು.

" ಏನು ಬೇಡಿ." ಅಂದೆ ನಾನು.

" ಅಂಗೆಲ್ಲಾ ಆಯ್ತುದ. ಶಂಪಾದಕರಾಗಿ ಒಂದು ಟೀನಾರ ಕುಡೀದ್ದಿದ್ರೆ ಆಯ್ತುದಾ ... " ಅಂತ ಹೇಳಿ " ಲೇ ಮುರಿಗ್ಯಾ ಶಂಪಾದಕರಿಗೆ ಒಂದು ಟೀ ತೆಗೊಂಬಾ" ಅಂತ ಅಪ್ಪಣೆಯಿತ್ತು " 555 "ರ ಟಿನ್ನನ್ನು ಮುಂದೆ ನೂಕಿ " ಒಂದು ಶಿಗರೇಟು ಕುಡೀರಿ " ಎಂದರು.

" ಈಗ ಏನು ಕೇಳೋದ್ಯೆತೆ ಕೇಳಿ." ಅಂತ ಹೇಳಿ ಒಂದು ಸಿಗರೇಟ್ ತಾವು ಹಚ್ಚಿಸಿಕೊಂಡು ಕುಳಿತರು.

ನಾನು ಸವಾಲನ್ನು ಆರಂಭಿಸಿದೆ.

" ತಾವು ಯಾವ್ಯಾವ ಪಿಕ್ಚರ್‌ನಲ್ಲಿ ನಟಿಸಿದ್ದೀರಾ....?"

" ನಟ ಶಿರೋಮಣಿ, ಅಂಟರ್‌ವಾಲಿ, ಡಾಕೂ ಮಗಳು ಇನ್ನೂ ಎಷ್ಟೋ ಐತೆ...."

" ತಮ್ಮ ವಯಸ್ಸೆಷ್ಟು."

" ಆಗ್ಯೆತೆ ನಲ್ವತ್ತರ ಅತ್ರತ್ರ...."

" ತಮ್ಮ ಹಾಬೀಸೇನು ..!"

" ಕುದುರೆ ಸವಾರಿ, ಈಜೋದು, ಕತ್ತಿವರಸೆ, ಮುಷ್ಟಿಯುದ್ಧ ಅವೇಕೆ ಇಸ್ಪೀಟಾಟ....."

" ಏನಾದ್ರು ಬಣ್ಣದ ಕಲೆ. ಚಿತ್ರ ಕಲೆಗಿಲೆ ಉಂಟೋ...."

" ಐತೆ ಅದೂ ಒಂದು ಚಟ. ಒಂದು ಡಬ್ಬ ಪೈಂಟು ತರಿಸಿವ್ನಿ. ಲೇ ಮುರಿಗ್ಯಾ ಸಾಮಿಯೋರ್ಗೆ ಪೈಂಟ್ ಡಬ್ಬ ತೋರಿಸ್ಲಾ " ಎಂದರು ಚಿನ್ನಪ್ಪ.

" ನಿಮಗೆ ಪ್ರಿಯವಾದ ನಟನಟಿಯರ ಹೆಸರು ಹೇಳಿ" ಅಂತ ನಂಬರ್ ಐದನೇ ಮಾಮೂಲು ಸವಾಲನ್ನೆಸೆದೆ.

" ಗ್ರೇಟಾಗಾರ್ಬೋ, ಚಾರ್ಲಿ ಚಪ್ಲಿ, ತಮಿಳಿನಾಗೆ ವೈಕುಂಠ ಭಾಗೋತ್ರು."

ತಾವು ಚಿತ್ರಲೋಕವನ್ನು ಪ್ರವೇಶಿಸಿದ ಬಗೆ....?"

" ನಾನು ಅಂದ್ಕಂಡಿದ್ದೆ ಒಂದು ಅದು ಆಗಿದ್ದೆ ಒಂದು ಎಂದರು ಮತ್ತೊಂದು ಬಾರಿ " 555 "ರ ಟಿನ್ನಿಗೆ ಕೈಯಿಕ್ಕುತ್ತಾ.

" ನಂಗೆ ಮೊದ್ಲಿಂದ್ಲೂ ಆಕ್ಟ್ ಮಾಡೋ ಖಯಾಲಿ. ಯಥಾಪರ್ಕಾರ ನಮ್ಮಪ್ಪನಿಗೆ ಅದು ಆಗ್ದು. " ಸುಮ್ಕೆ ಬೇಸಾಯ ಮಾಡು. " ಅಂತ ಹೇಳ್ತಿದ್ದ ಅವ. ಆಗ ನನ್ನ ಶರೀರ ಕೂಡ ಇಂಗಿರಲಿಲ್ಲ ನಿಮ್ಮಾಗೆ ಉಫ್ ಅಂದ್ರೆ ಆರೋಗೋ ಆಗೆ ಇದ್ದೆ. ಇಂತಾ ಮೈ ಇಟ್ಕೊಂಡು ಬೇಸಾಯ ಮಾಡೋಕೆ ಆಯ್ತುದಾ? ಈರೋ ಪಾಲ್ಗಿಲ್ಲದಿದ್ರೆ, ನಕ್ಲಿ ಪಾಲ್ನಾದ್ರು ಸಿಕ್ಕಬೋಯ್ದೂಂತ ನಾನು ಅನ್ಕಂಡು,

ಅಪ್ಪನ ಜೋಬ್ನಿಂದ ಒಂದ್ಹೈವತ್ತು ರೂಪಾಯಿ ಆರಿಸ್ಕೊಂಡು, ಒಂಟೋದೆ. ಅಲ್ಲಿ ಅಣ್ಣಾಸಾಮಿಗೆ ಗಂಟುಬಿದ್ದೆ.

"ಆತ ಏನು ಡೈರೆಕ್ಟರೆ? ಪ್ರೊಡ್ಯೂಸರೇ? ಚಿತ್ರಲೋಕದಲ್ಲಿ ಆ ಹೆಸರನ್ನು ನಾನು ಕೇಳಿದಹಾಗೆ ಇಲ್ಲವಲ್ಲ." ಎಂದೆ ನಾನು.

"ಅದೆಂಗೆ ಕೇಳೋಕೆ ಆಯ್ತದೆ? ಅವ ಒಂದು ಪಿಕ್ಚರ್ರೂ ತೆಗೆದವ್ನಲ್ಲ" ಎಂದರು ಆಕ್ಟರು ಚಿನ್ನಪ್ಪ. ಅವರೇ ಮುಂದುವರಿಸಿದರು. "ಆ ಮಾರಾಯ ನಿಂದ್ಲೆ ನಾನು ಈ ಮಟ್ಟಕ್ಕೆ ಬಂದೆ ಆ ಪುಣ್ಯಾತ್ಮನ್ನ ಈ ಒತ್ನಲ್ಲೀ ನೆನೀಬೇಕು." ಅಂತ ಹೇಳಿ, "555"ನ್ನು ಬಾಯಿಗೆ ಗಿಡಿದುಕೊಂಡರು.

ರಣ ಬಿಸಿಲು ಹೊರಗೆ ಹೊಗೆಯಾಡುತ್ತಿತ್ತು.

"ಮತ್ತೆ ತಾವು ಚಿತ್ರದಲ್ಲಿ ಭಾಗವಹಿಸಿದ ಬಗೆ?" ನಾನು ಕಾತರಿಸಿದೆ.

"ಏಳ್ತೀನಿ ವಸಿ ಸುಮ್ಕಿರಿ" ಎಂದು ಹೇಳಿ, ಬಾಯಿಯಲ್ಲಿ ಹಿಡಿದುಕೊಂಡಿದ್ದ '555'ಕ್ಕೆ ಬೆಂಕಿಯಿಟ್ಟು ಸಾವಕಾಶವಾಗಿ ಮಾತನ್ನು ಮುಂದುವರೆಸಿದರು.

ಅಣ್ಣಾಸಾಮಿಯು "ಕುಂಭಕೋಣಂ ಫಿಲಂಸ್"ಗೆ ಇಸ್ಟಾರುಗೋಳು ಬೇಕೂಂತ ತಿಳಿಯಿತ್ಲು, ನಾನೂ ಅತ್ತು ರೂಪಾಯಿ ಅಪ್ಲಿಕೇಸನ್ ಫೀಜು ತೆತ್ತು ಅರ್ಜಿ ಗುಜರಾಯಿಸಿದೆ. ಅಣ್ಣಾಸಾಮಿಯು ಕತ್ತಮೇಲೆ ಕುಂತುಮ್ಯಾಕೆ ನಂಗೂ ಒಂದು ಛಾನ್ಸ್ ಸಿಕ್ತು.

"ಯಾವ ಪಾರ್ಟು ತಮ್ದು....?"

"ಪಾರ್ಟೆಲ್ಲೈತೆ ಪಿಕ್ಚರ್ರೇ ಇಡಿದಿದ್‌ಮ್ಯಾಕೆ...."

"ಮತ್ತೇನು ಮಾಡಿದ್ರಿ ...?"

"ದ್ವಾಸೆ ಇಟ್ಟು ರುಬ್ದೆ ..."

"ತಮ್ಮ ಮಾತು ಅರ್ಥವಾಗ್ಲಿಲ್ಲ...." ಎಂದೆ ನಾನು ತಲೆ ತುರುಸಿಕೊಳ್ಳುತ್ತಾ.

"ಅಣ್ಣಾಸಾಮಿ, ಪಾಪರ್ ನನ್ಮಗ, ಯಾರ್ದೋ ಮನೇನಾಗೆ ಐವ್ವತ್ತು ರೂಪಾಯಿ ಕದ್ದು ಕುಂಭಕೋಣಕ್ಕೆ ಬಂದಿದ್ದ. ಫಿಲಂ ತೆಗೀತೀನೀಂದ್ರೆ ಆ ಕಾಲ ದಾಗೆ ವಸಿ ಸಾಲ ಕೊಡೋರು. ದೊಡ್ಡ ಬಂಗ್ಲೆಯ ಬಾಡಿಗೆ ಸಾಲ, ದಿನಸಿ ಅಂಗ್ಡಿ ಯಿಂದ ಸಾಲ, ಒರಗಡೆ ನಿಂತ್ಕೊಳ್ಳೊ ವಾಚ್‌ಮನ್‌ಗೆ ಸಂಬಳ ಸಾಲ, ಇಂಗೇ ಎಲ್ಲಾ ಸಾಲದಾಗೆ ಮ್ಯಾನೇಜ್ ಮಾಡ್ತಿದ್ದ. ಪಾಲ್ದು ಕೇಳೋಕೆ ಬರೋರ ಕೂಟೆ ದುಡ್ಡು ವಸೂಲ್ ಮಾಡ್ಕೊಂತಾ ಆಯಾಗಿದ್ದ...."

"ಪಿಕ್ಚರ್ ತೆಗೀಲಿಲ್ವೆ?...."

"ಆ ಪೋರ್‌ಟ್ವೆಂಟಿ ನನ್ಮಗನ್ಗೆ ಪಿಚ್ಚರ್ ತೆಗೆಯೋ ಯೋಗ್ಯತೆ ಎಲ್ಲೈತ್ರೀ? ಇಂಗೆ ಸಾಲದಲ್ಲೇ ದರ್ಬಾರು ಮಾಡ್ಬುಟ್ಟು ಒಂದಿನ ಗಯಾಬಾದ. ಅವನೇ ಪರಾರಿಯಾದ ಮ್ಯಾಕೆ ನಂದೇನೈತೆ, ಅಲ್ಲಿಂದ ನಿಕಲಾಯಿಸಿದೆ.

" ತಾವು ಪಿಕ್ಚರ್‌ನಲ್ಲಿ ನಟಿಸಿದ ಬಗೆ....?" ಕಳಚಿದ ಸರಪಳಿಯನ್ನು ಕೂಡಿಸುವ ಸಾಹಸ ಮಾಡಿದೆ.

" ಅಣ್ಣಾಸ್ವಾಮಿಯಿಂದ ನನಗೆ ಇನ್ನೇನು ಆಗದಿದ್ರು, ಒಂದು ದೊಡ್ಡಸಲಾಯ ಆಯ್ತು ಅಂದನಲ್ಲಾ ಅದೇ ದ್ವಾಸೆ ಆಕೋದು. ನನ್ನಂಗೆ ದ್ವಾಸೆ ಆಕೋವ್ರೆ ಆ ಕುಂಭಕರ್ಣದಾಗೆ ಆಗಿರಲಿಲ್ಲ. ಬುದ್ಧಿ ಓಡಿಸಿ, ಒಂದು ದ್ವಾಸೆ ಓಟ್ಲು ತೆಗೆದೆ. ಅದೇ ದೊಡ್ಡದಾಯ್ತು. ಬಂಗ್ಲೆ, ಕಾರು, ಎಲ್ಲಾ ತಕ್ಕೊಂಡೆ ನಂದೇ ಒಂದು ಫಿಲಂಸ್ ತೆಗ್ದೆ. ಅದರಾಗೆ ಈರೋಪಾಲ್ಟು ಮಾಡ್ದೆ.

" ಫಿಲಂ ತೆಗೆದ್ರಾ? ಹೇಗೆ ನಡೀತು....?"

" ಕಲೆ ಅಂದ್ರೆ ಈ ಜನಗಳ್ಗೆ ಏನ್ರಿ ಗೊತ್ತೈತೆ ಕಲೆಕ್ಸನ್ನಾಗೋಕೆ. ಪಿಕ್ಚರ್ ಒಂಜಿನಾನು ನೆಡೀಲಿಲ್ಲಾ. ನಾನೇ ರೇಕ್ಕಂಡು ಅದ್ನ ಸುಟ್ಟೂ ಆಕ್ಬುಟ್ಟೆ.

" ಛೆ ...ಛೆ ...ಅನ್ಯಾಯ. ಊ ಆಮೇಲೆನಾಯ್ತು?"

" ಆಮೇಕೇನೈತೆ? ನನ್ನ ಸರೀರ ಕೂಡ ಊದ್ಕೊಂಡು, ಈಗಿರೋವಂಗೆ ಆಯ್ತು. ಅಣ, ಪರ್ಸನಾಲಿಟಿ ಎಲ್ಲಾ ಇದ್ಮೇಕೆ, ಫಿಲಂ ಮಾಡೋ ಜನದ ಗುರ್ತೂ ಆಯ್ತು, ಆಗ್ಲೆ ಬಕಾವಳೀಲಿ ಕಲ್ಡಿಪಾಲ್ಟು, ಟಾರ್ಜನ್‌ನಲ್ಲಿ ಗೋರಿಲ್ಲಾ ಪಾಲ್ಟು ಎಲ್ಲಾ ಮಾಡ್ದೆ...." ಅಂತ ಹೇಳಿ ಚಿನ್ನಪ್ಪನವರು ಒಂದು " ಧಂ" ಆಳವಾಗಿ ಹೊಗೆ ಎಳೆದರು.

" ಚಲನಚಿತ್ರೋದ್ಯಮದ ಬಗ್ಗೆ-ತಮ್ಮ ಅಭಿಪ್ರಾಯ?" ಅಂತ ನಾನು ಗಹನವಾದ ತಾರ್ಕಿಕ ಪ್ರಶ್ನೆಯನ್ನೇ ಹಾಕಿದೆ.

" ನಮ್ಮ ಪಿಕ್ಚರ್‌ಗೋಳು ಭಾಳ ಇಂದುಳಿದ್ಬುಟ್ಟವೆ"

" ಇದಕ್ಕೆ ಕಾರಣ ...?"

" ಎಷ್ಟೋ ಐತೆ. ಆದ್ರೆ ಅದರಲ್ಲಿ ಮುಖ್ಯವಾದ್ದು ಅಂದ್ರೆ ಈ ಬ್ಲಾಕ್ ಮನಿ ಪಾಲ್ಟು ಮಾಡೋವರ್ಗೆ ಸಂಬಳಾನ ಕರಿದುಡ್ಡಿನಲ್ಲಿ ಅರ್ದ, ಬಿಳಿ ದುಡ್ಡಿನಲ್ಲಿ ಅರ್ಧ ಕೊಡೋದು ಈ ಪಿಕ್ಚರ್ ಮಾಡ್ತಾರಲ್ಲ ಅವ್ರ ಪದ್ಧತಿ. ಎಷೋ ಜನ ಪ್ರೊಡ್ಯೂಸರ್ ಗೋಳು ಬ್ಲಾಕ್ ಮನಿ ಇರ್ಲಿ, ವೈಟ್ ಮನಿ ಕೂಡ ಸರಿಯಾಗಿ ಕೊಡ್ದೆ ಆಕ್ಟರುಗಳ್ನ ಕಾಹಿಸೋದ್ರಿಂದ, ಅವ್ರುಗೋಳು ಸರಿಯಾಗಿ ಪಾಲ್ಟು ಮಾಡ್ದೆ ಕೆಡಿಸಿಬುಡ್ತವೆ. ಇಂಗಾಗಿ ನಮ್ಮ ಪಿಕ್ಚರ್‌ಗೋಳು ಇಂದುಳಿದೈತೆ" ಎಂದು ತಮ್ಮ ಅಮೂಲ್ಯ ಅಭಿಪ್ರಾಯವನ್ನು ವ್ಯಕ್ತಪಡಿಸಿದರು ಚಿನ್ನಪ್ಪ.

ನನಗೆ ಮುಂದಕ್ಕೆ ಏನು ಪ್ರಶ್ನೆ ಕೇಳಬೇಕೆಂಬೋದು ತೋಚದೆ ಮೇಲೆದ್ದೆ. ಇಸ್ಟಾರ್ ಚಿನ್ನಪ್ಪನವರು ತಮ್ಮ ಕಪಿ ಮುಷ್ಟಿಯಿಂದ ನನ್ನ ಕೈ ಕುಲುಕುತ್ತಾ ಹೇಳಿದರು. "ಪೇಪರ್‌ನಾಗೆ ಆಕ್ಸಿದ ಮ್ಯಾಕೆ ಒಂದು ಕಾಪಿ ನಂಗೆ ಕಳಿಸಿಕೊಡಿ" ಅಂತ. ವಿಚಿತ್ರ ಭಂಗಿ ಹಾಗೂ ಪೋಷಾಕಿನಲ್ಲಿದ್ದ ತಮ್ಮ ಭಾವಚಿತ್ರವನ್ನು ಕೊಡಲು ಅವರು ಮರೆಯಲಿಲ್ಲ.

—ಕೆ. ಎಸ್. ಕಿಟ್ಟೇಸ್

ಆ ಮಗು 'ಆ' ಅನ್ನಬೇಕಲ್ಲ

ಜಪ್ಪಯ್ಯ ಅಂದರೂ ಆ ಮಗು ಬಾಯಿ ಬಿಡಬೇಕಲ್ಲ. ಬಾಯಿ ತೆರೆದು ನಾಲಿಗೆ ಚಾಚಿ ತೋರಿಸಬೇಕಲ್ಲ!

"ಎಲ್ಲಿ ಮರಿ! ಅಪ್ಪಚ್ಚಿ ಕೊಡ್ತೀನಿ, ಪೆಪ್ಪರ್ಮಿಂಟು ಕೊಡ್ತೀನಿ. ಆ ಅನ್ನು ಮರಿ ಡಾಕ್ಟರ್ ಮಾಮ ಕಾದಿದ್ದಾರೆ ನೋಡು. ಏನೂ ಮಾಡುಲ್ಲ ಮರಿ. ಎಲ್ಲಿ ಆ ಅನ್ನು ನೀ ಜಾಣ." ಎಂದು ಮುದ್ದು ಮುದ್ದಾಗಿ ಹೇಳುತ್ತಾ ತಾಯಿ ತಾನು ಬಾಯಿ ತೆರೆದು ನಾಲಿಗೆ ಚಾಚಿದ್ದೂ ಚಾಚಿದ್ದೇ. ಎಲಡಿಕೆ ರಂಗನ್ನು ತೋರಿಸಿದ್ದೂ ತೋರಿಸಿದ್ದೇ. ಆದರೆ ಆ ಮಗು ಬಾಯಿ ತೆರೆಯಬೇಕಲ್ಲ. ಬಿಗಿಯಾಗಿ ಮುಚ್ಚಿ ಕೊಂಡೇ ಇತ್ತು.

"ಈ ಟಾರ್ಚ್ ತೊಗೋ ಮಗು. ನಿಂಗೇ ಕೊಡ್ತೀನಿ. ಎಲ್ಲಿ ಬಾಯಿ ತೆಗಿ ಈ ಟಾರ್ಚಿನ ಬೆಳಕು ಬಿಟ್ಟು, ನಿಂಗೆ ಎಷ್ಟು ಹಲ್ಲಿದೆ ಎಣಿಸ್ತೀನಿ. ಹಲ್ಲಿಗೊಂದು ಬಿಸ್ಕತ್ ಕೊಡ್ತೀನಿ. ಬಹಳ ಶಹಣೆ ನೀನು, ಎಲ್ಲಿ ಬಾಯಿ ತೆಗಿ" ಅಂತ ವೈದ್ಯರು ತಾವು ಬಾಯನ್ನು ದೊಡ್ಡದಾಗಿ ತೆರೆದು ನಾಲಿಗೆ ಚಾಚಿದ್ದೂ ಚಾಚಿದ್ದೆ. ಆ ಮಗು 'ಆ' ಅನ್ನಬೇಕಲ್ಲ!

"ಎರಡು ಏಟು ಕೊಡ್ತೀನಿ ನೋಡು ಈಗ, ಸುಮ್ಮಗೆ ಬಾಯಿ ತೆಗಿ ಡಾಕ್ಟರು ನಾಲಿಗೆ ನೋಡ್ತಾರೆ. ಔಷಧಿ ಹಾಕುಲ್ಲ. ಇಂಜೆಕ್ಷನ್ ಕೊಡುಲ್ಲ ಎಲ್ಲಿ ಬೇಗ ತೆಗಿ, ಇಲ್ಲದೆ ಇದ್ದರೆ ಗೊಗ್ಗಯ್ಯನಿಗೆ ಹಿಡಿದುಕೊಡ್ತೀನಿ" ಅಂತ ಹೆದರಿಸುತ್ತಾ ಮಗುವಿನ ತಂದೆ ರೇಗಿ ತನ್ನ ಬಾಯನ್ನು ತೆಗೆದಿದ್ದೂ ತೆಗೆದಿದ್ದೇ. ಮಾದರಿಗೆ ಅನ್ನುವಂತೆ ತಾನು ನಾಲಿಗೆ ಚಾಚಿದ್ದೂ ಚಾಚಿದ್ದೇ. ಆದರೆ ಆ ಮಗು ಹೆದರಬೇಕಲ್ಲ. ಆ ಅಂತ ಅನ್ನಬೇಕಲ್ಲ!

ಪುಟ್ಟಮಗು, ಅದನ್ಯಾಕೆ ಹೆದರಿಸ್ತೀರಿ. ಒಳ್ಳೆ ಮಾತಾಡಿದರೆ ಅದೇ ನಾಲಿಗೆ ತೋರಿಸುತ್ತೆ. ಎಲ್ಲಿ ಪಾಪು ಅಜ್ಜೀಗೆ ನಾಲಿಗೆ ತೋರಿಸು, ಗುಳ್ಳಪಾವಟೆ ಕೊಡ್ತೀನಿ, ರವೆ ಉಂಡೆ ಕೊಡ್ತೀನಿ, ಮುತ್ತು ಕೊಡ್ತೀನಿ, ಅಂತ ಮುದುಕಿ ಮಗೂನ ಎತ್ತಿ ಕೊಂಡು ತೊಡೆ ಮೇಲೆ ಕೂರಿಸಿಕೊಂಡು ಬೂಚಿ ಬೂಚಿ ಮಾಡಿದ್ದೂ ಮಾಡಿದ್ದೇ. ಆದರೆ ಆ ಮಗು ಆ ಅನ್ನಬೇಕಲ್ಲ.

ಡಾಕ್ಟರಿಗೂ ಬೇಜಾರಾಯಿತು. "ಪರವಾಗಿಲ್ಲ ಸಾರ್, ನಾಲಿಗೆ ನೋಡದೇ ಇದ್ದರೂ ಆಯಿತು. ಈ ಔಷಧಿ ಕೊಡಿ ಸರಿಹೋಗುತ್ತೆ ಅಂತ ಚೀಟಿ ಬರೆದು ಕೊಟ್ಟು ಹೊರಗೆ ಹೋಗುತ್ತಿದ್ದರು. ಬಾಗಿಲ ಹತ್ತಿರ ಅರೆಕ್ಷಣ ನಿಂತು ಮಗುವಿಗೆ 'ಟಾ ಟಾ' ಮಾಡಿದರು

ಅಗ ಆ ಮಗು ಏನು ಮಾಡಿತು ಗೊತ್ತೆ? ಟಾ ಟಾ ಅಂತ ಕೈಯ್ಯಾಡಿಸಲಿಲ್ಲ. ಮುಖವನ್ನು ಉದ್ದಮಾಡಿ, ನಾಲಿಗೇನ ಪೂರ್ತಿ ಚಾಚಿ ಡಾಕ್ಟರನ್ನ ಅಣಕಿಸಿತು!

ಸುಬ್ಬುವಿನ ಮಾವ ತೀರಿಕೊಂಡಾಗ

ಮೊನ್ನೆ ನಮ್ಮ ಸುಬ್ಬುವಿನ ಮಾವ ಹಳ್ಳಿಯಲ್ಲಿ ತೀರಿಕೊಂಡರು. ಆ ಸುದ್ದಿ ತಿಳಿದಾಗ ಸುಬ್ಬು ಅವರ ಗುಣಗಾನ ಮಾಡಿ ಶೋಕಿಸಿದ್ದೇ ಶೋಕಿಸಿದ್ದು. ದುಃಖ ಸಾಗರದಲ್ಲಿ ಮುಳುಗಿದ ಮಾವನವರ ಕುಟುಂಬದವರನ್ನು ಸಂತಯಿಸಿ ಬರುತ್ತೇನೆಂದು ಸುಬ್ಬು ಹಳ್ಳಿಗೆ ಹೊರಟ. ಒಂದು ವಾರ ಬಿಟ್ಟು ಹಿಂದಿರುಗಿದ, ಉತ್ತರ ಕ್ರಿಯಾದಿಗಳು ಮುಗಿದಮೇಲೆ. ಆದರೆ ಆ ಶೋಕ ಸಾಗರದಲ್ಲಿ ಮುಳುಗಿ ಬಂದರೂ ಸುಬ್ಬು ಗೆಲುವಾಗಿರುವ ಹಾಗೆ ಕಾಣಿಸಿತು. ಹಾಗಂತ ಹೇಳಿದೆ ಅವನಿಗೆ.

" ಹೌದೆ? ಗೆಲುವಾಗಿದೇನೆಯೇ? ಎಂದು ಕೇಳಿದ ತಾಪತ್ರಯ್ಯಂಗಾರಿ ಸುಬ್ಬು.

" ನಿಜಾಪ್ಪ ಮುಖ ಸ್ವಲ್ಪ ಉಬ್ಬಿದ ಹಾಗಿದೆ" ಎಂದೆ.

ಸುಬ್ಬು ಹಿಗ್ಗಿ " ಮುಖ ಮಾತ್ರ ಅಲ್ಲವಯ್ಯ, ಹೊಟ್ಟೇನೂ ಸ್ವಲ್ಪ ಉಬ್ಬಿಕೊಂಡಿರಬೇಕು ! ಮಾವನವರು ಆರು ಹೆಣ್ಣು ಆರು ಗಂಡು ಮಕ್ಕಳನ್ನು ಬಿಟ್ಟು ಕೈಲಾಸಕ್ಕೆ ಹೋದರು. ಹ್ಯಾಗೆ ಅವರೆಲ್ಲರ ಮುಖ ನೋಡೋದು ಅಂತ ಜೋಲು ಮೋರೆ ಹಾಕಿಕೊಂಡು ಹೋದೆ ಹತ್ತನೇ ದಿನ. ಆದರೆ ವಾರ ಕಳೆದು ಹಿಂದಿರುಗುವಷ್ಟರಲ್ಲಿ ಹೀಗೆ ಗೆಲುವಾಗಿ ಬಂದುಬಿಟ್ಟೆ.

" ಅದು ಹ್ಯಾಗೆ ಅಂತೀಯ ? ಆರು ಗಂಡು ಆರು ಹೆಣ್ಣು ಎಂಡೆನಲ್ಲ ಮಾವಂದ್ರಿಗೆ. ಇನ್ನು ಅವರ ಅಕ್ಕ ತಂಗಿ, ಅಣ್ಣ ತಮ್ಮ, ಭಾವ ಮೈದುನಂದಿರು, ನನ್ನಂಥ ಸೋದರಳಿಯಂದಿರು, ಮೊಮ್ಮಕ್ಕಳು ಮರಿಮಕ್ಕಳು ಅಂತು ಒಂದು ಚಿಕ್ಕ ಪದಾತಿ ಸೈನ್ಯವೇ ಸೂತಕದ ಮನೆಯಲ್ಲಿ ನೆರೆದಿತ್ತು. ಬೆಳಿಗ್ಗೆ, ಮಧ್ಯಾಹ್ನ, ರಾತ್ರಿ ನೂರು ಮಂದಿಗೆ ಊಟ ಕಾಫಿ ತಿಂಡಿ ಸ್ನಾನ ಅಂತ ಅಡಿಗೆಯವರಿಗೂ ಆಳುಗಳಿಗೂ ಒಂದು ಕ್ಷಣ ಬಿಡುವಿಲ್ಲ. ಹೀಗೆ ಜಮಾಯಿಸಿಕೊಂಡ ಮಂದಿ ಶೋಕಿಸಿದರೂ ಎಷ್ಟು ಶೋಕಿಸಬಹುದು ! ಗೊಂದಲವೇ ಗೊಂದಲ. ಕಂಡರೆ ಅದನ್ನು ಸೂತಕದ ಮನೆ ಅಂತ ಹೇಳುವ ಹಾಗೆಯೇ ಇರಲಿಲ್ಲ.

ಕೋಲಾಹಲವೇ ಕೋಲಾಹಲ. ದೊಡ್ಡವರೇನೋ ಗತಿಸಿದ ಮಾವಯ್ಯನವರ ನಡೆ ನುಡಿ ಪ್ರೀತಿ ವಾತ್ಸಲ್ಯಗಳನ್ನು ನೆನೆಸಿಕೊಂಡು ಆಗಾಗ ಕೊಂಚ ಕಣ್ಣೊರಸಿಕೊಂಡರು. ಆದರೆ ಮಕ್ಕಳಿಗೆ ಹಾಗೆ ಚಿಂತಿಸೋದಕ್ಕೇನು ಗೊತ್ತು ? ಅವಕ್ಕೆ

ಮದುವೆ ಮನೆಯೇನು, ಸೂತಕದ ಮನೆಯೇನು? ಅವು ನೆಗೆದಾಡಿದ್ದೇ ನೆಗೆದಾಡಿದ್ದು. ಚೀರಿದ್ದೇ ಚೀರಿದ್ದು. ತೊದಲಿದ್ದೇ ತೊದಲಿದ್ದು. ಓಡಿ ಬೇಡಿ ಕಬಳಿಸಿದ್ದೇ ಕಬಳಿಸಿದ್ದು. ಅವುಗಳ ಕೋಲಾಹಲ, ನಲಿದಾಟಗಳನ್ನು ಕಂಡೂ ಕಂಡೂ ದೊಡ್ಡವರು ಎಷ್ಟು ಹೊತ್ತು ಜೋಲುಮೋರೆ ಹಾಕಿಕೊಂಡಿರೋಕಾಗುತ್ತದೆ? ಅವು ನಕ್ಕಾಗ ಇವರೂ ನಕ್ಕರು. ಅವರು ಅತ್ತಾಗ ಸಂತಯಿಸಿದರು. ಊಟ ವಿಪರೀತವಾದಾಗ ಎರಡೆರಡು ಕಡುಬು ಕೂಡ ಕೊಟ್ಟರು-

ಮಾಡೋದಕ್ಕೆ ಕೆಲಸವಿಲ್ಲದ ಅಳಿಯಂದಿರೂ ಭಾವಂದಿರೂ ಅಲ್ಲಲ್ಲಿ ಗುಂಪು ಸೇರಿ ರಾಜಕೀಯ, ಸಾಹಿತ್ಯ, ಜ್ಯೋತಿಷ್ಯ, ವೈದಕೀಯ ಮಣ್ಣುಮಸಿ ಅಂತ ಹತ್ತು ಹಲವು ವಿಷಯಗಳನ್ನು ತೆಗೆದುಕೊಂಡು ಕೊನೆಮೊದಲಿಲ್ಲದೆ ಹರಟಿದರು ನಡು ನಡವೇ ಸಿಗರೇಟು ಹೋಮ ಮಾಡಿದರು. ನಶ್ಯ ಎಳೆದರು. ಗಹಗಹಿಸಿ ನಕ್ಕರು. ಒಂದೆಡೆ ಪುರೋಹಿತರು ತಮ್ಮ ಹಾಸ್ಯದ ಬುರುಡೆಯನ್ನು ಆಗಾಗ ಬಿಚ್ಚಿದರು. ಸತ್ತವರಿಗೆ ಸಂತಾಪ ಸೂಚಿಸಲು ಬಂದ ಬಂಧು ಮಿತ್ರರೂ, ಅವರ ಉದರ ಭರ್ತಿಗಾಗಿ ಬಂದ ಅಡಿಗೆಯವರೂ ತಮ್ಮದೇ ಶೈಲಿಯಲ್ಲಿ ಸಂಭಾಷಣೆ ಬೆಳೆಸಿದರು. ಚಾಟೂಕ್ತಿಗಳಿಂದ ಒಬ್ಬರನ್ನೊಬ್ಬರು ಚುಚ್ಚಿದರು.

ಒಂದೆಡೆ ಇಸ್ಪೀಟಿನ ಗುಂಪೂ ಸೇರಿತು. ಚಿಕ್ಕ ಪಿಲ್ಟುವೊಂದು ವಿಷಯ ತಿಳಿಯದೆ "ಅಮ್ಮ ಮದುಮಗ ಮದುಮಗಳು" ಎಲ್ಲಿ ಎಂದು ಕೇಳಿತು.

ತೀರಿಹೋದ ಮಾವನ ಕಿರಿ ಅಳಿಯಂದಿರು ಬಹಳ ಕಷ್ಟಪಟ್ಟು ಹೆಂಡತಿಯ ಏಕಾಂತ ಸಾನ್ನಿಧ್ಯ ಸಂಪಾದಿಸಿ ಬಿಕ್ಕಿ ತೊಡಗಿದ ಅವಳನ್ನು ಅಚೀಚೆ ನೋಡಿಕೊಂಡು ಬೆನ್ನು ತಟ್ಟಿ ಸಂತೈಸುತ್ತಾ ಆ ನೆಪದಲ್ಲಿ ಯಥೇಚ್ಛ ಹರಟೆದರು. ಅದರ ಸುಳಿವು ದೊರೆತವರೊಬ್ಬರು ಸಾಕಷ್ಟು ಕೀಟಲೆಯೆಬ್ಬಿಸಿ ಆ ಜೊತೆನಕ್ಕಿಗಳನ್ನು ಗೋಳು ಹುಯ್ದುಕೊಂಡರು.

ಹಿರಿಯ ಅಳಿಯ ಸೈನ್ಸ್ ಮೇಷ್ಟರು ಕಾಲೇಜಲ್ಲಿ. ಎರಡನೇ ಅಳಿಯ ಡಾಕ್ಟರು. ಇಬ್ಬರೂ ಜೊತೆಗೆ ಊಟಕ್ಕೆ ಕುಳಿತಿದ್ದರು. "ಇಂಥ ದುಃಖದ ಸಂದರ್ಭದಲ್ಲಿ ಈ ರೀತಿ ಔತಣದೂಟ ಬಡಿಸುವುದೆಲ್ಲ ಸರಿಯೇ....ಯಾಕೋ ನಮ್ಮ ಆಚಾರಗಳೆಲ್ಲ ಅರ್ಥವಿಲ್ಲದವುಗಳ ಹಾಗೆ ಕಾಣಿಸುತ್ತವೆ" ಎಂದರು ಮೇಷ್ಟರು. "ನಿಜ ನಿಜ" ಅಂದರು ಹತ್ತಿರದವರು—ರವೆ ಉಂಡೆಯಲ್ಲಿ ಗೋಡಂಬಿ ಹುಡುಕುತ್ತಾ.

ಸಂಜೆ ಎಲ್ಲರೂ ಕುಳಿತು ಹರಟುತ್ತಿದ್ದಾಗ ಎರಡು ಮೂರು ವರ್ಷದ ಪಿಲ್ಟುಗಳೆರಡು ಒಂದು ಖಾಲಿ ಪಾತ್ರೆಯನ್ನು ಹಿಡಿದು ಕಡ್ಡಿಗಳಿಂದ "ಅನ್ನ ಚಾರು" ಅಂತ ಬಡಿಸುತ್ತಾ ಬಂದವು. ಬಡಿಸುವವರನ್ನು ಅನುಕರಿಸುತ್ತ. ಎಲ್ಲರೂ ನಕ್ಕಿದ್ದೇ ನಕ್ಕಿದ್ದು. ಆಗ ಟೀಕಿಸಿದ ಅಳಿಯಂದಿರೇ ಹೇಳಿದರು.।

"ಒಂದು ರೀತಿಯಲ್ಲಿ ಈ ಅದ್ದೂರಿಗಳೆಲ್ಲ ಸಾವಿನ ಮನೆಯಲ್ಲಿ ಇದ್ದರೇ ಒಳ್ಳೆಯದೋ ಏನೋ. ನೆಂಟರಿಷ್ಟರೆಲ್ಲ ಹೀಗೆ ಜಮಾಯಿಸಬೇಕು ಉತ್ತರ ಕ್ರಿಯೆಯ ನೆಪದಲ್ಲಿ. ಔತಣ ನಡೆಯಬೇಕು. ಮಕ್ಕಳು ಮರಿ ಹೀಗೆ ನಲಿಯಬೇಕು. ಆಗ ದುಃಖ ಸ್ವಲ್ಪವಾದರೂ ಕಡಿಮೆಯಾಗುತ್ತದೆ. ಇಲ್ಲದೆ ಹೋದರೆ ಎಲ್ಲರೂ ಕೇವಲ ಗೋಳಿಟ್ಟು ಕಾಯಿಲೆ ಬರಿಸಿಕೊಳ್ಳುವುದೇ ಸರಿ. ಹಿಂದಿನ ನಮ್ಮ ಹಿರಿಯರು ಹೆಡ್ಡರೇನಲ್ಲ. ಮನಃಶಾಸ್ತ್ರ, ವೈದ್ಯಶಾಸ್ತ್ರ ಎರಡೂ ಚೆನ್ನಾಗಿ ಬಲ್ಲವರು. ಆದ್ದರಿಂದಲೇ ಇಂಥ ಏರ್ಪಾಡುಗಳನ್ನೆಲ್ಲ ಮಾಡಿದಾರೆ" ಎಂದರು.

ಅವರಂದಿದ್ದು ನಿಜ. ಉತ್ತರ ಕ್ರಿಯೆಯಲ್ಲಿ ಶೋಕ ಸಂತಪ್ತ ಜೀವಿಗಳು ಅಲ್ಲಿ ಇರಲಿಲ್ಲವೆಂದಲ್ಲ. ಆದರೆ ಹೆಚ್ಚಿನವರು ಅವರಿಗೆ ಬದುಕನ್ನು ಸಹವಾಗಿ ಮಾಡಿ ತಾವೂ ಮೂರು ಮೂರು ಪೌಂಡು ತೂಕ ಹೆಚ್ಚಿಸಿಕೊಂಡು ಹೋದರು. ಇಂಥ ವಾತಾವರಣದಲ್ಲಿ ನಾನೂ ಸೇರಿಕೊಂಡೆ. ನೀನು ಕಂಡಹಾಗೆ ಗೆಲವಾಗಿಯೇ ಹಿಂದಿರುಗಬೇಕಾಯಿತಪ್ಪ" ಎಂದ ಸುಬ್ಬು. "ರತ್ನ ಹೇಳಿದ ಹಾಗೆ ದುಃಖದ ಕತ್ತು ಹಿಡಿದು ತಳ್ಳಿಸಿ, ನಗುವಿನ ಪರದೆ ಬೀಳ್ಸೋದರಲ್ಲಿ ಹಿಂದಿನವರು ನಿಸ್ಸೀಮರು ಕಣಯ್ಯ" ಎಂದು ಬೇರೆ ಸೇರಿಸಿದ, ಏನೋ ಒಂದು ಸತ್ಯ ಸಾಕ್ಷಾತ್ಕಾರವಾದವನಂತೆ.

ಇನ್ನೂ ಆತ ಶೋಕಿಸೋದಿದ್ದರೆ ಗತಿಸಿದ ಮಾವನವರಿಗಾಗಿ ಅಲ್ಲ, ಮಾವನವರ ಮನೆಯಲ್ಲಿ ಕಳೆದ ದಿನಗಳಿಗಾಗಿ ಎನ್ನಬೇಕು ಅಷ್ಟೆ!

—ರಾಮಿ.

ಚೆಂದದೂರಿನಲ್ಲಿ ಒಬ್ಬ ಚೆಲುವೆಯಿದ್ದಳು
ರಂಗನೆಲ್ಲ ಉಗುರೆಗಿರಿಸಿ ಬೆಡಗುತ್ತಿದ್ದಳು.
ಒಬ್ಬನನ್ನು ಹೊರಗಿಟ್ಟು
ಒಬ್ಬನನ್ನು ಒಳಗಿಟ್ಟು
ಒಬ್ಬನನ್ನು ನೋಡಿ ತಾನು ನಲಿಯುತ್ತಿದ್ದಳು.

ಕೆರೆ ಕಟ್ಟೆಮೇಲೆ ಕಾವಕ್ಕ

ಕೆರೆಕಟ್ಟೆಮೇಲೆ ಮಡಿಪೆಟ್ಟಿಗೇನ ಕೊಂಕುಳಲ್ಲಿಟ್ಟುಕೊಂಡು ಕಾವಕ್ಕ ಸಾತಕ್ಕ ನಡೆದು ಹೋಗ್ತಾ ಇದ್ದರು. ಆಚೆಕಡೆ ಕಟ್ಟೆಗೆ ಹೋಗಿ ಬಟ್ಟೆ ಒಗೆದುಕೊಳ್ಳೋಣ ಅಂತ. "ನೋಡೇ ಸಾತಿ, ಕಾಶಿಯಾತ್ರೆಗೆ ಹೋಗಿದ್ದಾಗ ಒಂದು ಹಿತ್ತಾಳೆ ತಾಳಿ ತಂದಿತ್ತಿಲ್ಲವೇ ನಾನು. ಅದನ್ನು ಇಷ್ಟು ವರ್ಷ ಎಷ್ಟು ಜೋಪಾನವಾಗಿಟ್ಟುಕೊಂಡಿದ್ದೆ, ನಿಂಗೇ ಗೊತ್ತಲ್ಲ. ಮೊನ್ನೆ ನೋಡೇ, ಪಾತ್ರೆ ತೊಳೆಯುಕ್ಕೆ ಅಂತ ಸೊಸೆ ಕೂತಾಗ, ನನ್ನ ಹಿತ್ತಾಳೆ ತಾಲೀನೂ ಎದುರಿಗೆ ಇಟ್ಟುಕೊಂಡಿದ್ದಳು. ನಾನು ಹೇಳಿದೆ ಹುಣಿಸೆ ಚರಟ ಹಾಕಿ ತಿಕ್ಕಬೇಡಮ್ಮಾ, ಕಾಶಿ ಕಡೆ ಹಿತ್ತಾಳೆ ಅದು, ಕಪ್ಪುಗೆರೆ ಬಿದ್ದು ಹೋಗುತ್ತೆ ಅಂತ. ಆದರೆ ಅವಳು ಕೇಳಬೇಕಲ್ಲ. "ಇಲ್ಲ ಅತ್ತೆಮ್ಮ ನೋರೇ! ಹಗೂರಾಗಿ ಚರಟ ಉಪ್ಪು ಬೆರೆಸಿ ತೊಳೀತೀನಿ ಅಂತ ಬಿನ್ನಾಣದಿಂದ ಹೇಳಿದಳು.

ನಮ್ಮ ಯಜಮಾನರು ಕಾಶೀಲಿ ಇದನ್ನು ಕೊಂಡು ಕೊಟ್ಟಿದ್ದರು ಕಣೆ. ಊಟ ಮಾಡೋವಾಗ ಈ ತಾಲೀಲೆ ನೀರಿಟ್ಟುಕೊ ಅಂತ ಬಹಳ ಪ್ರೀತಿಯಿಂದ ಹೇಳಿದ್ದರು. ಆವತ್ತಿನಿಂದ ಇವತ್ತಿನತನಕ ೧೫-೧೬ ವರ್ಷ, ಒಂದು ದಿನವೂ ಬೇರೆ ತಾಲೀಲಿ ನಾನು ನೀರು ಕುಡಿದಿಲ್ಲ. ಅಂಗೈಲಿ ತಾಲಿ ಹಿಡಿದುಕೊಂಡು, ನೀರು ಕುಡಿಯಕ್ಕೆ ಎತ್ತಿದಾಗಲೆಲ್ಲ ಯಜಮಾನರೇ ಬಂದು ನೀರು ಕುಡಿಸಿದ ಹಾಗೆ ಆಗುತ್ತೆ. ಅವರು ಸತ್ತು ಸ್ವರ್ಗಕ್ಕೆ ಹೋಗಿ ಹತ್ತು ಹನ್ನೆರಡು ವರ್ಷಗಳಾಗಿರಬಹುದು. ಆದರೂ ದಿನಾಲೂ ನೀರು ಕುಡಿಸ್ತಾನೆ ಇದಾರೆ ಎಂದು ಅನ್ನಿಸ್ತಾ ಇದೆ. ಅದಕ್ಕೇಮ್ಮಾ ಹುಷಾರಾಗಿರು ಅಂತ ಹೇಳೋದು. ಅಂತ ಗಿಣಿಗೆ ಹೇಳಿದ ಹಾಗೆ ಹೇಳ್ತಾನೆ ಇದ್ದೆ. "ಹೆದರಬೇಡಿ. ಅತ್ತೆಮ್ಮಾ! ನಮ್ಮ ಮಾವನವರು ಪ್ರೀತಿಯಿಂದ ಕೊಂಡು ಕೊಟ್ಟ ತಾಲಿ ಇದು ಅಂತ ನನಗೂ ತಿಳಿಯೋದು. ನಿಮ್ಮ ಮಗನೂ ಹುಷಾರು ಕೊಟ್ಟಿದ್ದರು. ಆದಕ್ಕೇ ನೋಡಿ ಬಕೆಟ್ ತುಂಬ ನೀರಿಟ್ಟುಕೊಂಡಿದ್ದೀನಿ. ಆದರಲ್ಲೇ ತಾಲೀನ ನೆನೆಸಿ ತೊಳೀತೀನಿ ಅಂತ ಹೇಳ್ತಾ ಹೇಳ್ತಾ ಆ ತಾಲೀನ ಬಕೆಟ್ಟಿನೊಳಕ್ಕೆ ಎಸೆದೇ ಬಿಟ್ಟಳು. "ಹಿತ್ತಾಳೆ ತಾಲಿ ಮುಳುಗೇ ಹೋಯ್ತು"

ಅಂತ ಹೇಳ್ತಾ ಹೇಳ್ತಾ ಕಾವಕ್ಕ ಕೆರೆ ಕಟ್ಟೆಮೇಲೆ ಜಾರಿ ನೀರಿನೊಳಗೆ ಮುಳುಗೇ ಹೋದಳು. ತಾಲಿ ಹಾಗೇ ಬುಳು ಬುಳು ಅಂತ ನೀರುಗುಳ್ಳೆಗಳನ್ನು ಎಬ್ಬಿಸುತ್ತ.

ದಿವನಾದ ಕಥೆ

(ಪುಣ್ಯಾತ್ಮರಿಗೆ ಮಾತ್ರ)

ಒಂದಾನೊಂದು ಊರಿನಲ್ಲಿ ಒಬ್ಬ ಕುಮಾರಿ ಇದ್ದಳು. ಎಂಥಾ ಕುಮಾರೀಂತೀರಿ —ರಾಜಕುಮಾರಿ.

ಅವಳಪ್ಪ ಅವಳನ್ನು ಗಿಣಿ ಹಾಗೆ ಸಾಕಿದ. ಅವಳು ಪ್ರಾಪ್ತವಯಸ್ಕಳಾದ ಮೇಲೆ ವರ ಹುಡುಕುವ ತೊಂದರೆ ರಾಜನನ್ನೂ ಬಿಡಲಿಲ್ಲ! ನನ್ನ ಕುಮಾರಿ ಎಷ್ಟು ಲಕ್ಷಣವಾಗಿ ಕೆಂಪಗಿದ್ದಾಳೆ. ಅಡಿಗೆ ಮಾಡಬೇಕಾದ ಪ್ರಸಂಗ ಬಂದರೆ ಕಂದಿ ಹೋಗ್ತಾಳಲ್ಲಾ ಅಂತ ಎದೆ ಕುದಿಸಿಕೊಂಡ—ಎರಡು ಸೇರಕ್ಕಿ ಅನ್ನ ಮಾಡುವಷ್ಟು! ಮಂತ್ರಿಯನ್ನು ಬರಮಾಡಿ ತನ್ನ ದುಃಖವನ್ನು ಬಸಿದು ಮಂತ್ರಿಗೂ ಹಂಚಿದ—ನನ್ನ ಕುವರಿಗೆ ಅಡಿಗೆ ಮಾಡುವುದಕ್ಕೆ ಬರುವ ರಾಜಕುಮಾರನನ್ನೇ ವರನಾಗುವಂತೆ ಮಾಡೆಂದ.

ಏತನ್ಮಧ್ಯೆ ಈ ಕುಮಾರಿ ತನ್ನ ಪ್ರೇಮಿಗೆ ಪ್ರೇಮಪತ್ರ ಬರೆಯಲು ಶುರು ಮಾಡಿದಳು. ಪ್ರೇಮಪತ್ರಕ್ಕೆ ಯಾರಾದರೇನು?

"ಸ್ವಾಮಿ, ನೀವು ಅಡಿಗೆ ಮಾಡುವುದನ್ನು ಕಲಿತುಕೊಳ್ಳಲೇಬೇಕು, ಇಲ್ಲದಿದ್ದರೆ ನಮ್ಮಪ್ಪ ನಿಮ್ಮನ್ನ ಒಪ್ಪುವುದಿಲ್ಲ (ನಾನೇ ನಿಮ್ಮ ಕೈಹಿಡಿಯಬೇಕಾಗಿದ್ದರೂ ಕೂಡ!) ಕೂಡಲೇ ಯಾವುದಾದರೂ ಕಾಲೇಜಿಗೋ, ಗುರುಕುಲಕ್ಕೋ, ಪ್ರೈವೇಟ್ ಸ್ಕೂಲಿಗೋ, ಇಲ್ಲ ಕಡೆಗೆ ಮನೆಯಲ್ಲೇ ಟ್ಯೂಶನ್ ಇಡಿಸಿಕೊಂಡೋ ಅಡಿಗೆ ಕಲಿತುಕೊಳ್ಳಿ" ಎಂದು ಕಳಕಳಿಯಿಂದ ಬಿಸಗೊಂಡಳು.

ಅಂತೂ ಇಂತೂ ಆ ಪುಣ್ಯಾತ್ಮ ಎಲ್ಲಾ ತರಹೆ ಅಡಿಗೆ ಮಾಡುವುದನ್ನು ಕಲಿತುಕೊಂಡ. ಹೋಂ ಸೈನ್ಸ್‌ನಲ್ಲಿ ಪ್ರೊಫೆಸರ್ ಆದ. ಈಗ ಯಾವ ಕಾಲೇಜಿನಲ್ಲಿದ್ದಾನೋ ಗೊತ್ತಿಲ್ಲ. ಅಂತೂ ಅವನೂ ಚರಿತ್ರಾರ್ಹ.

ನಿಮಗೆ ಅರ್ಥವಾಯ್ತೇ ಆ ಪ್ರೇಮಿಗಳು ಯಾರೂ ಅಂತ?

ಅಯ್ಯೋ, ಈಗಲೂ ಅರ್ಥವಾಗಲಿಲ್ಲವೇ? ಆ ಕುಮಾರಿ ಹೆಸರು: ದಮಯಂತಿ ಆ ಪ್ರೇಮಿ ಹೆಸರು: ನಳ ಅಂತ.

ಹೀಗೆ ಹಿಂದಿನ ಕಾಲದಿಂದ ಒಂದಲ್ಲ ಒಂದು ರೀತಿಯ ಪ್ರೇಮ ಪದ್ಧತಿ ಇರೋವಾಗ, ದಿನೇ ದಿನೇ ಪೇಪರ್‌ನಲ್ಲಿ ಕಾಲೇಜ್ ವಿದ್ಯಾರ್ಥಿ ವಿದ್ಯಾರ್ಥಿನಿಯರ ಮೇಲೆ ಏಕಿಷ್ಟು—ರೋಮಿಯೋ ಜೂಲಿಯಟ್, ಹೈಹೀಲ್ಡ್ ಶೂ, ಟೈಲ್‌ಪ್ಯಾಂಟ್ ಅಂತ ಬರೆದಾಡ್ತಾ ಇದಾರೇಂತ ನನ್ನ ಮನಸ್ಸಿನಲ್ಲೇ ಅನ್ಕೊಳ್ತಿರೋವಾಗ—ಅನ್ನ ಸೀದ ವಾಸ್ನೆ ಅಡಿಗೆ ಮನೆಯಿಂದ ಬಂತು. ಅಯ್ಯೋ ನಳಮಹಾರಾಜಾ ನನಮ್ಯಾಗೆ ಕೋಪ ಮಾಡಬ್ಯಾಡ, ಇದ್ದದ್ದಿದ್ದ ಹಾಗೇ ಬರ್ದೆ—ಅಂತ ಅಡಿಗೆ ಮನೆಗೆ ಹೋದೆ, ಏಕೆಂದರೆ ನಮ್ಮ ದಮಯಂತೀನೂ ಆ ದಮಯಂತೀ ಹಾಗೇನೇ! ಅಡಿಗೆ ಬರೋಲ್ಲ! ಅಷ್ಟೆ!

—ಹಾ. ವೈ. ಸೂರಿ.



" ಇನ್ಮೊಂದ್ ಸರ್ತಿ ಏನಾದ್ರು ಕ್ರಿಕೆಟ್ ಮ್ಯಾಚ್ ನೋಡಕ್ಕೋಗಿ ಮಾಡ್ತೀನಿ "

ಅವನಿಗೆ ಅದೇ ಇಷ್ಟ

ಬ್ಯಾಂಡು ಬಾರಿಸಿದ ಶಬ್ದ ಕೇಳಿಸಿತು. ಮುಸಾಫರ ಖಾನೆಯಿಂದ ಹೊರಕ್ಕೆ ಬಂದೆ, ಏನಿರಬಹುದು ನೋಡೋಣ ಅಂತ. ಮೂರು ನಾಲ್ಕು ಜನರು ನೊರೆ ನೀರು ತುಂಬಿದ ಶೀಷೆಗಳನ್ನು ಕೈಲಿ ಹಿಡಿದುಕೊಂಡು, ಆಗಿಂದಾಗ್ಗೆ ಅದರಿಂದ ಗುಟುಕು ಗುಟುಕು ಕುಡಿಯುತ್ತ, ದೆವ್ವದ ಕುಣಿತದ ಹೆಜ್ಜೆಗಳನ್ನು ಹಾಕುತ್ತ ರಸ್ತೆಯಲ್ಲಿ ಬರುತ್ತಿದ್ದರು ಕುಡಿದು ಕುಣಿಯೋ ಭಕ್ತರಿರುವ ಯಾವ ದೇವರ ಮೆರವಣಿಗೆ ಇರಬಹುದು ಎಂದು ಅನುಮಾನ ಬಂತು. ಅಷ್ಟು ಹೊತ್ತಿಗೆ ಕುಣಿಯುವವರ ಹಿಂದೆ ಇದ್ದವನೊಬ್ಬ ನನ್ನ ಬಳಿಗೆ ಬಂದು ಕಡ್ಡಿ ಇದೆಯಾ ಎಂದು ಕೇಳಿ, ಕಿವಿ ಹಿಂದಿನಿಂದ ಬೀಡಿಯೊಂದನ್ನು ತೆಗೆದು ಬಾಯಿಗಿಟ್ಟುಕೊಂಡ. ಜೇಬಿನಿಂದ ಕಡ್ಡಿ ಪೆಟ್ಟಿಗೆ ತೆಗೆದು ಅವನ ಬೀಡಿಗೆ ಬೆಂಕಿ ಕೊಡುತ್ತಾ, ಇದು ಯಾವ ದೇವರ ಎಂಥಾ ಮೆರವಣಿಗೆ ಕಣಪ್ಪಾ! ಕುಡಿದು ಕುಣೀತಾ ಹೋಗ್ತಿದ್ದಾರಲ್ಲಾ ಎಂದು ಕೇಳಿದೆ.

"ಅವನಿಗೆ ಇದೇ ಇಷ್ಟ" ಎಂದು ಹೇಳಿ ಅವ ಹೊರಟುಹೋದ.

ಆ ಹೊತ್ತಿಗೆ ಬ್ಯಾಂಡಿನವರು ಕಾಣಿಸಿಕೊಂಡರು. ಸಿನಿಮಾ ಹಾಡುಗಳನ್ನೇ ಬಾರಿಸುತ್ತಿದ್ದರು. ಮಧ್ಯೆ ಮಧ್ಯೆ ಒಬ್ಬಿಬ್ಬರು ಬಾಯಿ ಹಾಡುಗಾರಿಕೆಗೆ ಶುರುಮಾಡಿ ಮೇರೆ ಪ್ಯಾರಿ, ಪ್ಯಾರ್ ಕರೂಂ ಅಂತ ಪಕ್ಕದಲ್ಲಿದ್ದ ಗಡ್ಡದವನ ಗಲ್ಲವನ್ನು ಹಿಡಿಯುತ್ತಿದ್ದರು. ಓಹೋ! ಇವರೂ ಕಂಠಪೂರ್ತಿ ಈಚಲಮ್ಮನ ತೀರ್ಥವನ್ನು ಸೇವಿಸಿದ್ದಾರೆ ಅಂತ ಅರ್ಥವಾಯಿತು. ಬ್ಯಾಂಡಿನ ಪಂಗಡದ ಒಬ್ಬ ಹುಡುಗ ನನ್ನ ಬಳಿಗೆ ಬಂದ. ಎಲಡಿಕೆ ತಟ್ಟೇನ ಹಿಡಿದ. ತೊಗೊಳ್ಳಿ ವಿಳ್ಯೇದೆಲೆ ಅಡಿಕೆ ಎಂದ. ತಾಂಬೂಲ ಯಾಕೆ ಕೊಡ್ತಿದ್ದೀ, ಈ ಮೆರವಣಿಗೆ ಯಾರದ್ದು? ಎಂದು ಕೇಳಿದೆ.

ಹಿಂದಕ್ಕೆ ಬೆರಳು ತೋರಿಸುತ್ತಾ "ಅವನಿಗೆ ಇದೇ ಇಷ್ಟ" ಎಂದು ಹೇಳಿ ತಾನೇ ಎರಡು ಎಲೆ ಸ್ವಲ್ಪ ಅಡಿಕೆ ತೆಗೆದು ನನ್ನ ಕೈಯ್ಯಲ್ಲಿಟ್ಟು ಮುಂದಕ್ಕೆ ನಡೆದ.

ಬ್ಯಾಂಡಿನವರ ಹಿಂದೆ ಇಬ್ಬರು ದಾರಿಯುದ್ದಕ್ಕೂ ಸೀರೆಯನ್ನು ಹಾಸಿಕೊಂಡು ಬರುತ್ತಿದ್ದರು. ಅವರ ಹಿಂದೆಯೇ ತುಂಬು ಮೈಕಟ್ಟಿನ ಐದಾರು ತರುಣಿಯರು ಥಕ್ಕ ಥೈ ಅಂತ ಕುಣಿಯುತ್ತ, ಸೆರಗನ್ನು ಹಾರಿಸುತ್ತ, ಜಾರಿದ ಸೆರಗನ್ನು ಸರಿಪಡಿಸಿಕೊಳ್ಳುತ್ತ, ನಾಚ್ ಮಾಡುತ್ತ ಬರುತ್ತಿದ್ದರು. ಕಣ್ಣಂಚಿನಲ್ಲಿ ಕಾಡಿಗೆಯನ್ನು ಕಿವಿಯತನಕ ಗೀರೆರೆದಿದ್ದ ಒಬ್ಬ ದಢೂತಿ ನಾಚುಗಾರ್ತಿ ನನ್ನ ಕಂಡು, ನನ್ನ ಬಳಿಗೆ

ಬಂದು ಹಠಾತ್ತನೆ ಕೆನ್ನೆಯನ್ನು ಚಿವುಟಿದಳು. "ಯಾಕಮ್ಮಾ! ಏನಾಗಿದೆ ತಾಯಿ!" ಎಂದು ಕೆನ್ನೆ ತಡವರಿಸಿಕೊಳ್ಳುತ್ತಾ ಕೇಳಿದೆ.

"ಅವನಿಗೆ ಇದೇ ಇಷ್ಟ" ಎಂದು ಹೇಳುತ್ತಾ ಆಕೆ ತಿರುಗಿ ತನ್ನ ಸಂಗಾತಿಯ ರೊಡನೆ ಹೋಗಿ ಸೇರಿಕೊಂಡಳು.

ನಾಯಕಸಾನಿಯರ ಈ ಮೆರವಣಿಗೆ ಮುಂದೆ ಹೋದಾಗ ಇಬ್ಬಿಬ್ಬರು ಕೂಲಿ ಯಾಳುಗಳು ರಸ್ತೆಯಮೇಲೆ ಹಾಸಿದ್ದ ಸೀರೆಗಳನ್ನು ಮಡಚಿಕೊಂಡು ಮುಂದೆ ಹಾಸುಕ್ಕೆ ಓಡುತ್ತಿದ್ದರು.

ಅವರ ಹಿಂದೆ ಬಂದವರು, ಬುಟ್ಟಿಗಳನ್ನು ಹೊತ್ತಿದ್ದರು. ಯಾರನ್ನಾದರೂ ಕಂಡರೆ, ಬುಟ್ಟಿ ಇಳಿಸಿ, ಅದರಿಂದ ಏನನ್ನೋ ತೆಗೆದುಕೊಟ್ಟು ಮುಂದೆ ನಡೆಯು ತ್ತಿದ್ದರು. ಇವರಲ್ಲೊಬ್ಬ ಮುಸಾಫರಖಾನೆಯ ಗೇಟಿನ ಹತ್ತಿರ ನನ್ನನ್ನು ಕಂಡ. ತಕ್ಷಣ ಓಡಿಬಂದ. ಬುಟ್ಟಿ ಇಳಿಸಿದ ತುಂಬಿದ ದೊನ್ನೆಯನ್ನು ನನ್ನ ಕೈಲಿಟ್ಟ. ಅದರ ಘಮಘಮದಿಂದಲೇ ಬೆಳ್ಳುಳ್ಳಿ ಮುಂದಾದ ಬಿರಿಯಾನಿ ಅಂತ ಹೇಳಬಹು ದಾಗಿತ್ತು. ಯಾಕಪ್ಪಾ ನನಗೆ ಕೊಟ್ಟೆ ಎನ್ನುವಂತೆ ಅವನನ್ನು ನೋಡಿದೆ. ಅವನೂ ಹಿಂದಕ್ಕೆ ಕೈ ತೋರಿಸಿ

"ಅವನಿಗೆ ಇದೇ ಇಷ್ಟ" ಎಂದು ಹೇಳಿ ಹೊರಟುಹೋದ

ಕತ್ತಿವರಸೆಯೋರು, ಕರಡಿ ಮಜಲಿನ ಜಟ್ಟಿಗಳು, ದೊಂಬಿದಾಸರು, ದೊಂಬ ರಾಟದವರು ಎಲ್ಲರ ತಂಡಗಳೂ ಮೆರವಣಿಗೆಯಲ್ಲಿ ಸಾಗಿದವು ಗಾಢಾಬಟ್ಟೆಯ ಚೊಳ್ಳ, ಜುಬ್ಬ ಹಾಕಿ, ಗರಿಗರಿ ಮಾಸಲು ಟೋಪಿ ಧರಿಸಿದ್ದ ಮಹಾಜನರ ತಂಡವು ಅನಂತರ ಕಾಣಿಸಿಕೊಂಡಿತು. ರಾಜಕೀಯದ ಕಮಟುವಾಸನೆ ಬೀದಿಯಲ್ಲೆಲ್ಲಾ ಹರಡಿತು. ಇವರು ಯಾಕಾರು ಈ ಮೆರವಣಿಗೇಲಿ ಬಂದರು? ಇದೇನು ಚುನಾ ವಣಾ ಕಾಲವಲ್ಲವಲ್ಲ! ಎಂದು ಅನುಮಾನ ಬಂತು. ಆದರೂ ವೋಟಿನ ಬೇಟೆಗಾ ರರು, ಸದಾಸಿದ್ಧರಾಗಿರಿ ಎಂಬ ಸ್ಕೌಟ್ ನೀತಿಯನ್ನು ಅನುಸರಿಸುತ್ತಾರೇನೋ ಎನ್ನಿಸಿತು.

ಈ ಪಟಾಲಂನಲ್ಲಿದ್ದ ಒಬ್ಬ ನನ್ನನ್ನು ಕಂಡ. ತತ್‌ಕ್ಷಣ ನನ್ನಕಡೆಗೆ ಓಡಿಬಂದು ನೀವು ಯಾವಾಗ ಸಾರ್ ಇಲ್ಲಿಗೆ ಬಂದಿದ್ದು ಎಂದು ಕೇಳಿದ ಅವನ ಗುರುತು ನನಗೆ ಸಿಗಲಿಲ್ಲ. ನನ್ನ ಪರಿಚಯ ಅವನಿಗಿದೆ ಅಂತ ಗೊತ್ತಾಯಿತು. ನಿನ್ನೆ ಸಂಜೆ ಬಂದೆ ಕಣಪ್ಪಾ, ಅಂತ ಹೇಳಿ ಸುಮ್ಮಗಾದೆ ಯಾಕೆ ಸಾರ್ ನನ್ನ ಜ್ಞಾಪಕ ಬರಲಿಲ್ಲವೇ ಬೆಂಗಳೂರಿನಲ್ಲಿ ನಿಮ್ಮನೆಗೆ ಬಂದು ಚಂದಾ ಕೊಡಿ ಅಂತ ಪೀಡಿಸ್ತಾ ಇತ್ತಿಲ್ವೇ ಎಂದ. ಈಗ ಜ್ಞಾಪಕ ಬಂತಪ್ಪ. ನೀನು ಇಲ್ಲೇನು ಮಾಡ್ತಾ ಇದೀ ಎಂದೆ. ಚಂದಾ ಎತ್ತಿದ ಹಣವೆಲ್ಲ ಕೂಡಿಟ್ಟುಕೊಂಡು, ನಮ್ಮ ಈ ಹಳ್ಳೀಗೆ ಬಂದೆ. ಇಲ್ಲೇ

ಲೀವಾದೇವಿ ಮಾಡ್ತಾ ಇದೀನಿ. ಅಂದ. ಈ ಮೆರವಣಿಗೆ ಯಾವ ದೇವರದು? ಇದೇನೆಲ್ಲಾ ಸೋಜಿಗ ಎಂದು ಕೇಳಿದೆ.

ಯಾವ ದೇವರದೂ ಅಲ್ಲ ಮೆರವಣಿಗೆ. ನಮ್ಮೂರಿನ ಗಿರಣಿ ಸಾಹುಕಾರರು ನಿನ್ನೆ ಸತ್ತುಹೋದರು. ಅವರ ಕಳೇಬರವನ್ನು ಗಿರಣಿ ಊರಿಂದ ಹುಟ್ಟೂರಾದ ಇಲ್ಲಿಗೆ ರಾತ್ರ್ರೋರಾತ್ರಿ ತಂದರು. "ನನ್ನ ಸ್ಮಶಾನ ಯಾತ್ರೇಲಿ ಎಲ್ಲರೂ, ನಾನು ಜೀವನ ಮಾಡಿದ್ಹಾಂಗೇ ಮಾಡ್ತಾ ನಡಿಬೇಕು" ಅಂತ ಅವರು ಆಸೆ ವ್ಯಕ್ತಪಡಿಸಿದ್ದರಂತೆ. ಅದೇ ತರಹಾ ಎಲ್ಲಾ ಏರ್ಪಾಡನ್ನು ಮಾಡಿಕೊಂಡೇ ಇಲ್ಲಿಗೆ ಬಂದಿದ್ದರು. ಎಂದು ವಿವರಣೆ ಕೊಟ್ಟ.

ಮತ್ತೆ ಈ ರಾಜಕೀಯದವರು ಯಾಕೆ ಇಲ್ಲಿ ಎಂದೆ.

ಗಿರಣಿ ಸಾಹುಕಾರರು, ನಾಯಕಸಾನಿಗಳಿಗೆ ಕೊಡೋ ಅಷ್ಟೇ ಹಣವನ್ನು ರಾಜಕೀಯದವರಿಗೆಲ್ಲಾ ಕೊಡುತ್ತಿದ್ದರು. ಕೃತಜ್ಞತೆ ಸೂಚಿಸುವುದಕ್ಕೆ ಅಂತ ಅವರೂ ಬಂದು ಸೇರಿಕೊಂಡರು. ನಾನೂ ಅಷ್ಟೇ ಅಂತ ಹೇಳಿದ.

ಭಾಪುರೇ ಭಾಪ್ ಎಂದುಕೊಂಡೆ.

—ಕುಮಾರ್

ಜಪಾನಿನಲ್ಲಿ ೧೩–೧೪ ವರ್ಷದ ಹುಡುಗ ಹುಡುಗಿಯರಿಗೂ ಬ್ಲಡ್ ಪ್ರೆಸರ್ ಖಾಯಿಲೆ ಬರುತ್ತಿದೆಯಂತೆ.

—ಆ ವಯಸ್ಸಿನಲ್ಲೇ ಸಂಸಾರ ತಾಪತ್ರಯಗಳು ಹೆಚ್ಚಾಗಿ ಹೀಗಾಗಿರಬಹುದೆ?

*   *   *   *

(ಪು. ತಿ. ನ. ಅವರ ಕ್ಷಮೆ ಬೇಡಿ)

ಐದಕ್ಕೈದು ಡ್ರಾದೊಳೆಂಡು
ಹೋಗ್ರ್ರೊ, ಅದರಿಂದೇನು ಕುಂದು
ಏನ್ನೊ ಸೋಲೊ ಮಾತೆ ವಜಾ
ಮ್ಯಾಚ್ ಕಾಂಬುದೊಂದೆ ಮಜಾ

ಹಾಕ್ಕೊಳ್ಳಿ ಪಾಪ ದಣಿದಿದ್ದ

ಮಾರಿ ಗುಡಿ ಎದುರಿನ ಬಯಲಿನ ಸುತ್ತ ಮಾವಿನ ಸೊಪ್ಪಿನ ತೋರಣ ಕಟ್ಟಿದ್ದರು. ಬಾಜಾಬಜಂತ್ರಿ ಬಾರಿಸುವ ಗ್ರಾಮಫೋನ್ ರೆಕಾರ್ಡು ಬಜಾಯಿಸ್ತಾ ಇತ್ತು. ಸುತ್ತಲೂ ಜನರು ನೆರೆದಿದ್ದರು.

ಶುಕ್ರವಾರದ ಸಂತೇನ ಮುಗಿಸಿಕೊಂಡು ನಮ್ಮ ಹಳ್ಳಿಗೆ ಹಿಂತಿರುಗುತ್ತಿದ್ದಾಗ ಈ ದೃಶ್ಯವನ್ನು ಕಂಡೆ. ಅರೆ! ಬೆಳಿಗ್ಗೆ ಊರು ಬಿಟ್ಟು ಸಂತೇಗೆ ಹೋದಾಗ ತೆಪ್ಪಗಿದ್ದ ಊರು ಹಿಂತಿರುಗುವಷ್ಟರಲ್ಲೇ ಈ ಮಾರ್ಪಾಡು ಹೊಂದಿದೆಯಲ್ಲಾ! ಯಾರಮೇಲಾದರೂ ಮಾರಮ್ಮ ಕಾಣಿಸಿಕೊಂಡಿರಬಹುದೇ? ಏನಾದರೂ ಮೈಲಿಗೆ ತಾಕಿರಬಹುದೇ? ಎಂದು ಅನುಮಾನಿಸುತ್ತ ಹತ್ತಿರಕ್ಕೆ ಹೋದೆ. ವಿಚಾರಿಸಿದೆ. ಯಾವನೋ ಒಬ್ಬ ಯುವಕ ತಮಿಳು ದೇಶದಿಂದ ಬಂದು ಪಟೇಲರನ್ನು ಕಂಡು ನಾಲ್ಕು ದಿನ ಹಗಲೂ ರಾತ್ರಿ ಒಂದು ಕ್ಷಣ ಬಿಡುವಿಲ್ಲದೆ ಮಾರಿ ಬಯಲಿನಲ್ಲಿ ಬೈಸಿಕಲ್ ಸವಾರಿ ಮಾಡ್ತೀನಿ ಅವಕಾಶ ಕೊಡಬೇಕು. ಮಹಾಜನರು ಕೊಟ್ಟ ಬಹುಮಾನದಿಂದ ಎರಡು ವಾರ ಹೊಟ್ಟೆ ಹೊರೆದುಕೊಳ್ಳುತ್ತೀನಿ ಎಂದು ಹೇಳಿಕೊಂಡನಂತೆ. ಪಟೇಲರು ಹ್ಞೂ ಅಂದರಂತೆ. ಪಟೇಲರ ಕೂಲಿಯಾಳುಗಳು ಯುವಕನಿಗೆ ನೆರವಾದರಂತೆ. ಅಹರ್ನಿಶಿ ಸೈಕಲ್ ಸವಾರಿ ಶುರುವಾಗಿತ್ತಂತೆ.

ನಾನೂ ನೋಡಿದೆ. ಗಾಣದ ಎತ್ತು ತಿರುಗುವ ಹಾಗೆ ಬೈಸಿಕಲ್ಲಿನ ಮೇಲೆ ಆತ ಸುತ್ತು ತಿರುಗುತ್ತಿದ್ದ. ಗಾಣದ ಎತ್ತು ಮುದಿಯಾಗಿದ್ದರೆ ಮೆಲ್ಲಗೆ ಹೆಜ್ಜೆ ಇಡುತ್ತಲ್ಲ, ಹಾಗೆ ಬೈಸಿಕಲ್ ಕೂಡ ಮಂದಗಮನದಲ್ಲಿ ನಡೆಯುತ್ತಿತ್ತು. ಸೈಕಲ್ ಸವಾರನೂ ಬೇಸರವಿಲ್ಲದೆ ವಿಳಂಬಿತ್ ಕಾಲದಲ್ಲಿ ಮಂದಹಾಸವನ್ನು ಪ್ರದರ್ಶಿಸುತ್ತಾ ಸೈಕಲ್ ತುಳಿಯುತ್ತಿದ್ದ.

ಪಕ್ಕದಲ್ಲಿದ್ದವನನ್ನು ಕೇಳಿದೆ. ಬೆಳಗಿನಿಂದ ಇವ ಬೈಸಿಕಲ್ಲಿಂದ ಇಳೀಲೇ ಇಲ್ವಾ ಅಂತ. ಇಲ್ಲಾ ಅಂದ. ನನಗೆ ಆಶ್ಚರ್ಯವಾಯಿತು. ಯಾವುದಾದರೂ ಒಂದು ಸಭೆಯಲ್ಲಿ, ಒಂದು ಸಂಗೀತ ಕಚೇರಿಯಲ್ಲಿ, ಮದುವೆ ಮನೆಯಲ್ಲಿ, ಎರಡು ಗಂಟೆಗಳಿಗಿಂತ ಹೆಚ್ಚಾಗಿ ಕೂತರೆ, ಕಿವಿ ಮೇಲೆ ಬೇಗ ಜನಿವಾರವನ್ನ ಎಳೆದುಕೊಳ್ಳಬೇಕು ಎಂದು ತಡೆಯಲಾರದ ಬಾಧೆ ಆವರಿಸುತ್ತೆ. ಹಾಗಿರುವಾಗ ಇವ ಬೆಳಗ್ಗೆ

ಇಂದ ಇಳಿದೇ ಇಲ್ಲ ಎಂದರೆ ಇದೊಂದು ಮಹಾ ಸಾಹಸವೇ ಎನಿಸಿತು. ಆದರೂ ನಾಲ್ಕು ದಿನ ಹೀಗೇ ಸುತ್ತುತ್ತಿರುವುದು ಸಾಧ್ಯವೇ ಎನಿಸಿತು. ಪಕ್ಕದಲ್ಲಿದ್ದ ಪಂಡಿತರನ್ನು ಕೇಳಿದೆ. ಓಹೋ! ಅದು ಸಾಧ್ಯ ನಮ್ಮ ಆಯುರ್ವೇದದಲ್ಲಿ ಮೂಲಿಕೆಗಳಿವೆ. ಎರಡು ಸುತ್ತು ಅರೆದು ಕಷಾಯ ಹಾಕಿ ಕುಡಿದರೆ ಒಂದು ಮಂಡಲ ಜಲ ಮಲ ಬಾಧೆಗಳಿಲ್ಲದೆ ಇರಬಹುದು ಅಂದರು. ಆ ಮೇಲೆ ಅಂತಹ ವರನ್ನು ಸುಡುತ್ತಾರೆಯೋ ಅಥವಾ ಹೂಳಲೇಬೇಕೋ ಎಂದು ಕೇಳಬೇಕು ಅನ್ನಿಸಿತು. ಆದರೆ ಪಂಡಿತರು ಅಜಾನುಬಾಹುವಾಗಿದ್ದರು. ನಮಗ್ಯಾಕೆ ಇನ್ನೊಬ್ಬರ ಸುದ್ದಿ ಎಂದು ಸುಮ್ಮಗಾದೆ.

ಮನೆಗೆ ಹೋದೆ. ಸಂತೆ ವ್ಯಾಪಾರದಲ್ಲಿ ಸಾಕಷ್ಟು ಲಾಭ ಬಂದಿತ್ತು. ಆದರೂ ಸಂಜೆ ಕಂಡ ದೃಶ್ಯ ನನ್ನನ್ನು ಯೋಚನೆಗೆ ಈಡುಮಾಡಿತು.

ಹೊಟ್ಟೆಪಾಡಿಗೆ ನಾನಾ ಜನ ಬೇರೆ ಬೇರೆ ತರಹ ಉಪಾಯಗಳನ್ನು ಹೂಡುತ್ತಾರೆ. ಅವರು ಹೂಡುವ ಉಪಾಯಗಳಿಂದ ಇತರರಿಗೆ ಅಪಾಯ ಆಗಬಹುದು. ಆದರೂ ಜೀವನವನ್ನು ಸಾಗಿಸಲು ನೆರವಾಗುತ್ತದೆ. ಸಂತೇಗೆ ಹೋಗಿ ಮೊಳ ಅಳೆದು, ಈ ಕೈಯ್ಯಿಂದ ಆ ಕೈಗೆ ಬಟ್ಟೆ ಹಂಚಿ ನಾನೂ ಹೊಟ್ಟೆ ಹೊರಕೊಳ್ಳುತ್ತೇನೆ. ಮಹಾ ಭಾರತದ ಕಾಲದಿಂದ ಸೀರೆಗೆ ಮೊಳ ಹಾಕಿ ಎಳೆಯೋದು ರೂಢಿಯಲ್ಲಿ ಬಂದಿದೆ. ಆದರೆ, ಆದರೆ ಹೊಟ್ಟೆಪಾಡಿಗೆ ನಾಲ್ಕು ಹಗಲು ನಾಲ್ಕು ರಾತ್ರಿ ಬೈಸಿಕಲ್ ಸವಾರಿ ಮಾಡಬೇಕು ಅಂತ ಈ ಯುವಕನಿಗೆ ಹೇಗಾರೂ ತೋಚಿತು? ಯಾಕಾರೂ ತೋಚಿತು? ಈ ವಿಷಯ ವಿಷದಂತೆ ನನ್ನ ಮನಸ್ಸನ್ನು ಆವರಿಸಿಕೊಂಡಿತು.

ಹಸಿ ಮೇಲೆ ಸ್ವಲ್ಪಹೊತ್ತು ಕೂತುಕೊಂಡರೆ ಸೊಂಟಕ್ಕೆ ನಿದ್ರೆ ಬಂದು ಬಿಡುತ್ತೆ. ತೊಡೆಯ ಪ್ರಾಣ ಹೋಗಿಬಿಡುತ್ತೆ. ಜಟ್ಟಂತ ಆ ಮೇಲೆ ಏಳುವುದಕ್ಕೆ ಅಸಾಧ್ಯ. ಹಾಗಿರುವಾಗ, ನಾಲ್ಕು ದಿನ ರಾತ್ರಿ, ೯೬ ತಾಸುಗಳು, ಬೈಸಿಕಲ್ಲಿನ ಮೇಲೆ, ಒರಗುವುದಕ್ಕೆ ಹಿಂದೆ ಕಂಬಗಳೂ ಇಲ್ಲ,. ಹೇಗೆ ಕೂರುತ್ತಾನೆ? ಹೀಗೆ ಕೂತುಕೊಳ್ಳಬಹುದು ಅಂತ ಇವನಿಗೆ ಹೇಗೆ ಗೊತ್ತಾಯಿತು?

ಈ ರೀತಿ ನನ್ನ ಮನಸ್ಸು ಹುಚ್ಚಾಪಟ್ಟೆ ಓಡಾಡತೊಡಗಿತು ನಾಲ್ಕು ದಿನಗಳಾದುವು. "ಏನು ಅಂದ್ರೆ, ಶುಕ್ರವಾರ ಸಂತೇಗೆ ಹೋಗಿ ಬಂದಾಗಿನಿಂದ ಶಿವಲೀಲೆ ಬಡಿದವರ ಹಾಗೆ ಮಂಕು ಬಡಿದಿದೆಯಲ್ರೀ? ಮೂರು ರಸ್ತೆ ಕೂಡೋ ಕಡೆ ಇಟ್ಟೆ ಎಡೆಯನ್ನು ಏನಾದರೂ ದಾಟಿ ಬಂದಿರಾ? ಪೂಜೆ ಹಾಕಿಸೋಣವೇ" ಎಂದು ಮನೆಯಾಕೆ ಕಾತುರದಿಂದ ಹೇಳಿದಾಗ ನನಗೂ ಈ ವಿಷಯವನ್ನು ತೀರ್ಮಾನಿಸಲೇಬೇಕು ಎಂದನ್ನಿಸಿತು

" ಏನೂ ಇಲ್ಲ ಕಣೆ. ಯಾವು ಯಾವುದೋ ಯೋಚನೆ. ಸ್ವಲ್ಪ ಹೊತ್ತು ಅಡ್ಡಾಡಿಕೊಂಡು ಬರ್ತೀನಿ, ಸರಿಹೋಗುತ್ತೆ" ಎಂದು ಎದ್ದೆ. ಮಾರಿಗುಡಿ ಬಯಲಿ

ನಲ್ಲಿ ಏನೋ ಆಗ್ತಾ ಇದೆಯಂತೆ. ಜನ ಸೇರಿದ್ದಾರಂತೆ. ಅತ್ತಲಾಗಾದರೂ ಹೋಗಿ ಬನ್ನಿ ಅಂತ ಮನೆಯಾಕೆ ಹೇಳಿದಳು. ನಾನು ಏನು ಮಾಡಬೇಕು ಅಂತ ಹೊರಟರ್ತೀನೋ ಅದನ್ನೇ ಆಕೇನೂ ಲಾಗಾಯ್ತಿನಿಂದ ಸಲಹೆ ಮಾಡುವ ಅಭ್ಯಾಸ ಆಗಿಬಿಟ್ಟಿದೆ. ಹಾಗಾಗಿ ಚಕಿತಗೊಳ್ಳದೆ ಹೊರಟೆ.

ಮಾರಿಗುಡಿ ಬಯಲಿನ ಬಳಿಗೆ ಹೋದಾಗ, ಬೈಸಿಕಲ್ ನಿರಂತರ ಸವಾರಿಯ ಪ್ರದರ್ಶನ ಮುಗಿದು, ಪಟೇಲರು ಬೈಸಿಕಲ್ಲಿಗೂ, ಸವಾರನಿಗೂ ಹೂ ಮಾಲೆಗಳನ್ನು ಹಾಕಿ ಮುಗಿಸಿದ್ದರು. ಬಹುಮಾನದ ಸಲುವಾಗಿ ತಟ್ಟೆಯನ್ನು ಸುತ್ತು ಕಳಿಸಲು ಶುರು ಮಾಡಿದ್ದರು. ಜನಸಂದಣಿಯೆಲ್ಲವೂ ಬೇಗ ಬೇಗ ಕರಗುಕ್ಕೆ ಶುರುವಾಗಿತ್ತು. ದೂರದಲ್ಲಿದ್ದ ಬೇವಿನ ಮರದ ಅಡಿಯಲ್ಲೇ ನಿಂತುಕೊಂಡೆ. ಎಲ್ಲರೂ ಹೊರಟು ಹೋಗಲಿ, ಆಮೇಲೆ ಈತನನ್ನು ಭೆಟ್ಟಿಯಾಗಿ ಎಲ್ಲಾ ವಿವರಗಳನ್ನೂ ತಿಳಿದುಕೊಳ್ಳೋಣ ಎಂದು ನಿರ್ಧರಿಸಿದೆ.

ಐದು ಹತ್ತು ನಿಮಿಷದಲ್ಲಿ ಸೈಕಲ್ ಸವಾರ ಒಂಟಿಯಾದ. ಆಗ ಹೋಗಿ ಅವನ ಭುಜ ಹಿಡಿದೆ.

“ ಎಲಾ! ಮಗನೆ! ನಿನಗೆ ಈ ತೆಪರು ಹ್ಯಾಗೆ ಹಿಡೀತು? ಹೊಟ್ಟೆಪಾಡಿಗೆ ಎಷ್ಟೆಲ್ಲಾ ಮಾರ್ಗಗಳಿವೆ. ಕಷ್ಟವಾದ ಮಾರ್ಗಗಳಾದ ದುಡಿಯೋದು ಕೆಲಸ ಮಾಡೋದು ಇಂತಹವುಗಳು ನಿನಗೆ ಒಪ್ಪಿಗೆಯಾಗದೆ ಇದ್ದರೆ ಸುಲಭವಾದ ದಗಾಕೋರ, ಕಳ್ಳ, ಪರ್ಮಿಟ್ ದಳ್ಳಾಳಿ, ಲೈಸೆನ್ಸ್ ದುಭಾಷ್, ಲಾಯರಿ ಇಂತಹ ಕಸಬುಗಳನ್ನು ಹಿಡಿಯಬಹುದಾಗಿತ್ತು. ಇದೆಲ್ಲವನ್ನೂ ಬಿಟ್ಟು ಈ ಅಡ್ಡದಾರಿ ಹಿಡಿದೆಯಲ್ಲ? ಇದಕ್ಕೆ ಏನು ಕಾರಣ? ಯಾವ ಪ್ರೇರಣೆ? ಎಂದು ಕೇಳಿದೆ.

ಸುಸ್ತಾಗಿದ್ದ ಅವನ ಮುಖ ನನ್ನನ್ನೇ ದುರುಗುಟ್ಟಿಕೊಂಡು ನೋಡಿತು ಆಗ ಅದಕ್ಕೆ ಕಳೆ ಏರಿದಂತೆ ಕಾಣಿಸಿತು. ಕೆಂಪೇರಿತ್ತು ಅವನ ಮುಖ. ತುಟಿಗಳು ಅದುರಿದುವು. ಆದರೂ ಮಾತು ಹೊರಬರಲಿಲ್ಲ

ಸ್ವಲ್ಪ ಹೆದರಿಕೆ ಆಯಿತು ನನಗೆ. ತೆಪರ ಅವನು ಅನ್ನೋದು ಖಂಡಿತ ಮಾರೀಗುಡಿ ಎದುರಿನಲ್ಲಿದ್ದಾನೆ ಸುಸ್ತಾಗಿದ್ದಾನೆ. ಈಗ ಆವೇಶ ಬಂದ ಹಾಗೆ ಕಾಣಿಸುತ್ತೆ. ಮಾತನಾಡುಕ್ಕೆ ಹೋಗ್ತಾನೆ, ಮಾತು ಬರುತ್ತಿಲ್ಲ. ಇನ್ನು ಇಲ್ಲಿರುವುದು ಅಪಾಯ ಎನ್ನಿಸಿತು ಅದಕ್ಕೆ ನಾನೇ ಮಾತಾಡಿದೆ.

ಯಾವುದಾದರೂ ರೀತಿಯಲ್ಲಿ ಅಂತರ್ವಾಣಿ ಹೀಗೆ ನುಡಿಯಿತೇ? ಮಹಾತ್ಮರೆಲ್ಲರಿಗೂ ಈ ರೀತಿ ಆಗಿಂದಾದ್ಯೆ ಅಂತರ್ವಾಣಿ ನುಡಿಯುತ್ತೆ ಎಂದು ಕೇಳಿದ್ದೆ, ಎಂದೆ.

ಗಹಗಹಿಸಿ ನಕ್ಕ ಅವ. ನಗುವನ್ನು ಕೇಳಿ ಅವನ ಕರುಳುಗಳೂ ಕೂಗುಕ್ಕೆ ಶುರುಮಾಡಿದುವು.

'ಅಂತರ್ವಾಣಿ ಕೇಳಿಸಿತೇ? ಘುರ್ ಘುರ್ ಅಂತ ಕರುಳು ಕೂಗಿತಲ್ಲ! ಅದೇ ಅಂತರ್ವಾಣಿ. ಅದು ನನಗೂ ಕೇಳಿಸಿತು; ನಿಮಗೆ ಕೇಳಿಸಿದ ಹಾಗೇನೇ. ಅದೇನೂ ಬೈಸಿಕಲ್ ಸವಾರಿ ಮಾಡು ಅಂತ ಹೇಳಲಿಲ್ಲ. ಎಂದ.

"ಹುಡುಗನಾಗಿದ್ದಾಗ ನಮ್ಮ ಚಿಕ್ಕಪ್ಪನ ಸೈಕಲನ್ನು ಕಂಡಾಗಲೆಲ್ಲಾ ನಾನೂ ಸವಾರಿ ಮಾಡಬೇಕು ಎಂದನ್ನಿಸುತ್ತಿತ್ತು, ನನಗೆ ಸವಾರಿ ಬರುತ್ತಿರಲಿಲ್ಲ. ಒಂದು ದಿನ ಬೈಸಿಕಲ್ ಸಿಕ್ಕಿತು. ಮನೆ ಮುಂದಿನ ತೋಟದ ಗೋಡೆಮೇಲೆ ನಿಂತು ಬೈಸಿಕಲ್‌ನ್ನು ಹತ್ತಿದೆ ಪೆಡಲ್ ಒತ್ತಿದೆ. ಗಿರ್ರಂತ ಬೈಸಿಕಲ್ ಹೊರಟಿತು ಕೀಲು ಕುದುರೆ ತರಹ ಹೊರಟಿತು. ಅದನ್ನು ಹ್ಯಾಗೆ ನಿಲ್ಲಿಸೋದು ಅಂತ ನನಗೆ ತಿಳಿಯಲಿಲ್ಲ. ಅದು ಹೋದ ಕಡೆ ನಾನೂ ಹೋದೆ. ಆರು ದಿನಗಳಾದಮೇಲೆ ಮಾರಿಗುಡಿಯ ಎದುರಿನ ಬಲಿಗುಂಬಕ್ಕೆ ಗುದ್ದಿತು ಆಗ ನಿಂತಿತು. ಬಿದ್ದವನು ಎದ್ದೆ. ಎಲ ಎಲಾ! ಆರು ದಿನ ಹಗಲೂ ರಾತ್ರಿ ಬೈಸಿಕಲ್ ಸವಾರಿ ಆಯ್ತಲ್ಲಾ! ಇದನ್ನೇ ಪ್ರದರ್ಶನ ಮಾಡೋಣ ಅಂತ ಶುರುಮಾಡಿದೆ ಮರ್ಮ ಈಗ ತಿಳೀತಲ್ಲಾ" ಎಂದ.

ತಿಳೀತಪ್ಪಾ ಎಂದು ಹೇಳಿ ಹಿಂತಿರುಗಲು ಹೆಜ್ಜೆ ಹಾಕಿದೆ. ಮರ್ಮ ತಿಳಿಸಿದ್ದಕ್ಕೆ ಗುರುದಕ್ಷಿಣೆ ಕೊಡು ಎಂದು ನನ್ನ ಜೇಬಿಗೆ ಕೈ ಹಾಕಿದ. ಸುತ್ತಲೂ ಯಾರೂ ಇದ್ದಿಲ್ಲ ಕೂಗಿಕೊಂಡರೆ ಯಾರೂ ಸಹಾಯಕ್ಕೆ ಬರುಲ್ಲ ಅಂತ ಗೊತ್ತು. ಅದಕ್ಕೇ ತೊಗೊಳ್ಳೋದು ತೊಗೊಳ್ಳಿ ಅಂತ ಸುಮ್ಮನಿದ್ದೆ. ಅವನು ಕೈ ತೆಗೆಯುತ್ತಲೂ ಮನೆಯ ಕಡೆ ಓಡಿದೆ ಜೇಬಿನಲ್ಲಿದ್ದ ಸುರುಳಿ ಸುತ್ತಿದ ಬಟ್ಟೆ ಚೀಲದಲ್ಲಿ ಹಣ ಇದ್ದಿಲ್ಲ. ಬರೀ ಎಲೆ ಅಡಿಕೆ ಕಡ್ಡಿಪುಡಿ. ಹಾಕ್ಕೊಳ್ಳಿ ಪಾಪ, ದಣಿದಿದ್ದ.

—ಬಚ್ಚ

ಮದ್ರಾಸ್ ರಾಜ್ಯದ ಮುನಿಸಿಪಲ್ ಚುನಾವಣೆಗಳಲ್ಲಿ ಕಾಮರಾಜರು ಜಯಭೇರಿ ಹೊಡೆದಾಗ,

—ಸೆರೆ ಮನೆಯಲ್ಲಿದ್ದ ಡಿ. ಎಂ. ಕೆ. ಮುಖಂಡರು, ರಾಜಾಜಿ ಹುಷಾರು ಕೊಟ್ಟಾಗ ಕೇಳಲಿಲ್ಲವಲ್ಲಾ ಎಂದು ಲಬೋ ಲಬೋ ದನಿಗೂಡಿಸಿದರಂತೆ.

* * * *

ಶ್ರೀ ಚಾಕೊ ಅವರನ್ನು ಯಾವುದಾದರೂ ಪ್ರಾಂತ್ಯದ ರಾಜ್ಯಪಾಲರನ್ನಾಗಿ ನೇಮಿಸುತ್ತಾರೆ ಎನ್ನುವುದು ಶುದ್ಧ ಕುಹಕ.

ಚೀಣೀಯರ ಮಾತೇ ಹೀಗೆ!

ಒಂದು ಮಾತಾಡಿದರೆ ಅದಕ್ಕೆ ಮೂರು ಅರ್ಥಗಳನ್ನ ಆ ಮೇಲೆ ಕಲ್ಪಿಸುವು ದಕ್ಕೆ ಅವಕಾಶ ಇರೋ ಹಾಗೆ, ಈಗಿನ ಚೀಣಿ ರಾಜಕಾರಣಿಗಳು ಮಾತನಾಡುತ್ತಾ ರಲ್ಲಾ, ಅದನ್ನು ಕುರಿತು ನಾನು ಟೀಕೆ ಮಾಡುತ್ತಿಲ್ಲ.

ಹಿಂದೆ ಚೀಣೀಯರಲ್ಲಿ ಆಧ್ಯಾತ್ಮಿಕ ಹಾಗೂ ಸಾಂಸ್ಕೃತಿಕ ಔನ್ನತ್ಯವಿದ್ದಾಗ, ಅವರಲ್ಲಿ ಮೇಧಾವಿ ಎನಿಸಿಕೊಂಡವರೂ ಕೂಡ ಎರಡು ಮಾತಾಡಿದರೆ, ಕೇಳಿದವರು ಗೊಂದಲಕ್ಕೆ ಬೀಳುತ್ತಿದ್ದರು. ಉದಾಹರಣೆಗೆ ಹೇಳ್ತೀನಿ:—

ಚೀಣೀ ಋಷಿಗಳಲ್ಲಿ ಹೆಸರಾದ ಚಾಂಗ್ ಟ್ಸೆ ಎಂಬಾತ ಒಂದು ಕತೆ ಹೇಳಿದ. ಒಬ್ಬ ಊಟಮಾಡಿ ಮಲಗಿದ್ದನಂತೆ. ಕನಸು ಬಿತ್ತಂತೆ. ಕನಸಿನಲ್ಲಿ ಅವನು ದುಂಬಿಯಾಗಿದ್ದನಂತೆ. ಹೂವಿಂದ ಹೂವಿಗೆ ಹಾರಿ ಮಧುವನ್ನು ಯಥೇಚ್ಛ ಕುಡಿದು, ಕಡೆಗೆ ತಂಪಾದ ಹಸಿ ಎಲೆಯ ಮೇಲೆ ಮಲಗಿ ನಿದ್ರೆಹೋದಂತೆ, ಕನಸು ಎಚ್ಚೆತ್ತಾಗ ಅವನಿಗೆ ಅನುಮಾನ ಬಂತಂತೆ. ನಾನು ಈಗ ಬಾಳುತ್ತಾ ಇರೋದೆಲ್ಲಾ ಆ ದುಂಬಿಯ ಕನಸೋ ಏನೋ? ದಿಟವಾಗಲೂ ನಾನು ದುಂಬಿಯೇ ಏನೋ? ಅಥವಾ ನಾನು ನಾನೇನೋ? ಎಂದು ತಾರ್ಕಿಸಿದನಂತೆ.

ಈ ಕತೆ ಕೇಳಿದ ಮೇಲೆ ಎಷ್ಟು ಗೊಂದಲಕ್ಕೆ ಬಿತ್ತು ಅಂತ, ನನ್ನ ಮನಸ್ಸು! ಅವತ್ತು ಕಾಮನ ಹಬ್ಬ, ಈ ಕತೆ ಓದಿದ ದಿವಸ. ಹೋಳಿಗೆ ಗಸಗಸೆ ಪಾಯಸ ಗಡದ್ದಾಗಿ ಉಂಡು ಮಧ್ಯಾಹ್ನ ಮಲಗಿದ್ದೆ. ಕಾಮಣ್ಣ ಸುಟ್ಟುಹೋದ, ಭೀಮಣ್ಣ ಬೆರಣಿ ತಂದ. ಅಂತ ಬೀದಿ ಹುಡುಗರು ಕೆಟ್ಟಕೆಟ್ಟದಾಗಿ ಕೂಗಿಕೊಳ್ಳುತ್ತಾ ಸಿಕ್ಕಿದ್ದನ್ನು ದೋಚಿಕೊಂಡು ಹೋಗುತ್ತಿದ್ದರು. ಅಂತಹ ಲಬೋ ಲಬೋ ಗಲಾಟೆ ಯಲ್ಲೂ ನಿದ್ದೆ ಹತ್ತಿತ್ತು. ನಿದ್ದೆಯಲ್ಲಿ ಯಥಾಪ್ರಕಾರ ಕನಸು. ಕನಸಿನಲ್ಲಿ ನಾನು ಗುಂಡುಕಲ್ಲಾಗಿದ್ದೆ. ಒರಳಿನಲ್ಲಿ ಗಸಗಸೆ ಹಾಕಿ ಅರೀತಾ ಇದೀನಿ. ಆಗ ಪಕ್ಕದ ಮನೆ ಪಾರ್ಥಸಾರಥಿ ಬಂದ. "ಏನೋ ಗುಂಡು! ಅಡಿಗೆಗೆ ಇಳಿದೆಯೇನೋ" ಎಂದ. ನೋಡಪ್ಪಾ ಪಾಚು! ಗಸಗಸೆ ಪಾಯಸ ಮಾಡಬೇಕಾದರೆ, ಹಾಲು ಬರೋ ಹಾಗೆ ಗಸಗಸೇನ ನುಣ್ಣಗೆ ಅರೆಯಬೇಕು ಮಾಡಿ ತೋರಿಸ್ತಾ ಇದೀನಿ" ಎಂದೆ. ಗಸಗಸೇಲಿ ಅಫೀಮು ಇರುತ್ತೆ ಕಣೋ, ಅರೀತಾ ಅರೀತಾ ರುಚಿ

ನೋಡುಕ್ಕೆ ಮುಕ್ಕಬೇಡ ಅಂತ ಹುಷಾರು ಹೇಳಿ ಹೊರಟು ಹೋದ ಅರೀತಾ ಅರೀತಾ ಸೊಕ್ಕು ಬಂದ ಹಾಗೇ ಆಯ್ತು. ಅಫೀಮೇನಾದರೂ ಹಾಗೆ ಮಾಡಿರ ಬಹುದು ಅಂತ ಅಂದುಕೊಂಡೆ. ಆ ಮೇಲೆ ಝೋಂಪು ಬಂದ ಹಾಗೆ ಆಯಿತು. ನಿದ್ರೆಯೇ ಬಂತು. ಗಾಢ ನಿದ್ರೆ ಬಂತು.

* * * *

ಕಾಫಿ ಬಿಸಿಯಾಗಿದೆ ತೊಗೊಳ್ಳಿ ಅಂತ ಶಿವಿದು ಎಬ್ಬಿಸಿದಾಗಲೇ ಎಚ್ಚರ ವಾದದ್ದು. ಕಾಫಿ ಕುಡಿದ ಮೇಲೆ ಕಾಮನ ಹಬ್ಬದ ಊಟದ ನೆನಪಾದದ್ದು. ಆಗಲೇ ಕನಸಿನ ಜ್ಞಾಪಕವು ಬಂತು.

ಈಗ ಬಂತಲ್ಲಾ ತೊಂಚಾವಂಚ. ಗುಂಡಕಲ್ಲು ನಿದ್ರೆ ಮಾಡುತ್ತಿದ್ದಾಗ ಅದರ ಕನಸಿನಲ್ಲಿ ನನ್ನ ಬಾಳು ನಡಿಯುತ್ತಾ ಇದೆಯೇ? ಅಂತ.

ಅಷ್ಟುಹೊತ್ತಿಗೆ ಪಾರ್ಥಸಾರಥಿ ಬಂದ. ಹಬ್ಬದ ದಿವಸ ಹೆಚ್ಚಾಗಿ ತಿಂದು ಮೈ ಜಡ್ಡಾಗಿದೆ ಎಲ್ಲಾರೂ ಅಡ್ಡಾಡಿಕೊಂಡು ಬರೋಣ ಅಂದ ಅವನ ಜತೇಲಿ ಹೊರಟೆ. ಮಿಡಲ್ ಇಸ್ಕೂಲ್ ಹತ್ತಿರ ಮಾಸ್ತರುಗಳು ಸಿಕ್ಕಿದರು. ಇಸ್ಪೀಟ್ ಆಡೋಣ ಬನ್ನಿ, ಇವತ್ತು ಕಾಮನ ಹಬ್ಬ ಎಂದರು ಅಷ್ಟು ಹೊತ್ತಿಗೆ ಸುಮಾರು ನೂರು ಗಜ ನಡೆದಿದ್ದೆ. ಸುಸ್ತಾಗಿತ್ತು. ಏದುಬ್ಬಸ ಬರುತ್ತಿತ್ತು. ವಿಶ್ರಾಂತಿ ತೊಗೋ ಅಂತ ಸೊಂಟ ತೊಡೆ ಹೇಳುತ್ತಿದ್ದುವು ಸರಿ ಅಂತ ನಾನೂ ಪಾರ್ಥ ಸಾರಥಿ ಇಸ್ಪೀಟ್ ಕಚೇರಿಗೆ ಸೇರಿಕೊಂಡೆವು.

ರಾತ್ರಿ ಹನ್ನೆರಡೋ ಒಂದೋ ಆಗಿದ್ದಿರಬಹುದು. ನಾವಿಬ್ಬರೂ ಪಾಪರಾಗಿದ್ದೆವು. ಲಬೋ ಲಬೋ ಅಂತ ಬೆಳ್ಳಂಬೆಳದಿಂಗಳಿನಲ್ಲಿ ಮನೆಗೆ ಹಿಂತಿರುಗಿದೆವು. ನಮ್ಮತ್ತೆ ಬಾಗಿಲು ತೆಗೆದರು. ಊಟ ಆಯಿತು ಎಂದು ಹೇಳಿ ಮಲಗುವ ಕೋಣೆಗೆ ಹೋದೆ. ಪುಟಾಣಿ ದೀಪ ಉರಿಯುತ್ತಿತ್ತು

ಹಾಸಿಗೆಯ ಮೇಲೆ ಹೆಂಡತಿ ಮಲಗಿದ್ದಾಳೆ. ಅವಳಿಗೂ ಗಾಢನಿದ್ರೆ. ಬಾಗಿಲು ತೆಗೆದಿದ್ದಾಗಲೀ, ನಾನು ಬಂದಿದ್ದಾಗಲೀ, ಯಾವುದೂ ಆಕೆಯನ್ನ ಎಬ್ಬಿಸಲಿಲ್ಲ. ತಲೆಯ ಕೆಳಗೆ ಬಲಗೈಯ್ಯನ್ನು ಇಟ್ಟುಕೊಂಡಿದ್ದಾಳೆ. ಬಲಪಾರ್ಶ್ವದ ಮೇಲೆ ಮಲಗಿದ್ದಾಳೆ. ಎಡಗೈಯ್ಯಲ್ಲಿ ಏನನ್ನೋ ತಬ್ಬಿಕೊಂಡಿದ್ದಾಳೆ ಅದರ ಮೇಲೆ ಸೆರಗು ಕವಿದಿದೆ. ನನಗೆ ಆಶ್ಚರ್ಯ! ಆಕೆಯ ಮುಖದ ಮೇಲೆ ಎಂದೂ ಕಾಣದ ಅತೀವ್ರ ಸಂತಸ!!

ನಮ್ಮ ಮದುವೆಯಾಗಿ ಹನ್ನೆರಡು ವರ್ಷಗಳಾಯ್ತು. ಅಶ್ವತ್ಥ ಪ್ರದಕ್ಷಿಣೆಯಿಂದ ನಾಗ ಪ್ರತಿಷ್ಠೆತನಕ, ಹಕೀಮರಿಂದ ಹೌಸ್ ಸರ್ಜನ್ ತನಕ, ಔಷಧಿಗಳಿಂದ ಆಪರೇಷನ್‌ಗಳ ತನಕ ಎಲ್ಲವೂ ಮುಗಿದಿದ್ದುವು. ಜಾತಕದಲ್ಲಿ ಮಕ್ಕಳ

ಯೋಗವಿಲ್ಲ ಅಂತ ಜ್ಯೋತಿಷ್ಕರು ತೀರ್ಮಾನ ಮಾಡಿ ಹೇಳಿದ್ದರು. ಪರಿಸ್ಥಿತಿ ಹೀಗಿರೋವಾಗ ಇವಳ ಪಕ್ಕದಲ್ಲಿ ಮಲಗಿರೋ ಮಗು ಯಾರದು? ಅದೇಕೆ ಇಲ್ಲಿಗೆ ಬಂತು? ಅದೂ ಯಾಕೆ ನಿದ್ರೆಮಾಡ್ತಾ ಇದೆ? ಎಂದೆಲ್ಲಾ ಅನುಮಾನ ಬಂತು. ಸೆರಗು ಎತ್ತಿ ಮಗುವಿನ ಮುಖ ನೋಡೋಣವೇ? ಪಕ್ಕದ ಮನೆ ಮಗು ಏನಾದರೂ ಸಂಜೆ ಆಟಕ್ಕೆ ಬಂದಿದ್ದು ಇಲ್ಲೇ ಮಲಗಿಬಿಟ್ಟಿದೆಯೋ? ಅದೆಲ್ಲಾದರೂ ಎದ್ದು ಬಿಟ್ಟರೆ, ಇವಳ ನಿದ್ರೆಗೂ ಭಂಗ ಬಂದಹಾಗೆ ಆಗುತ್ತಲ್ಲ! ಎಂದೆಲ್ಲಾ ಯೋಚನೆಗಳು ಬಂತು. ಆದರೂ ಸೆರಗೆತ್ತಿ ನೋಡಿದೆ ಏನಿತ್ತು ಅಲ್ಲಿ!! ಗುಂಡಕಲ್ಲು!!

ಅಷ್ಟು ಹೊತ್ತಿಗೆ ಬಾಗಿಲ ಆಚೆಯಿಂದ "ಬಿಸಿ ಹಾಲಿಟ್ಟಿದೀನಿ" ಎಂದು ಅತ್ತೆಮ್ಮ ನವರ ಕರೆ ಕೇಳಿಸಿತು ಬಾಲ ಮುದುರಿಕೊಂಡ ನಾಯಿಯ ತರಹ ಹೋದೆ. "ಸಂಜೆ ಮುಂದೆ ಹೊಟ್ಟೆಶೂಲಿ ಬಂತು, ಲಕ್ಕುಗೆ. ತತ್‌ಕ್ಷಣ ಡಾಕ್ಟರನ್ನು ಕರೆಸಿ ಔಷಧಿ ಕೊಡಿಸಿದೆ. ಆದರೂ ಶೂಲಿ ನಿಲ್ಲಲೇ ಇಲ್ಲ. ನನಗೂ ಹೀಗೇ ಒಂದೊಂದು ಸರ್ತಿ ಶೂಲಿ ಬರುತ್ತಿತ್ತು. ಆಗ ನಮ್ಮತ್ತೆಮ್ಮನವರು ಗುಂಡಕಲ್ಲನ್ನು ಹೊಟ್ಟೆಗೆ ದಬಾಯಿಸಿಕೊಂಡು ಮಲಕ್ಕೋ ಎಂದು ಹೇಳುತ್ತಿದ್ದರು. ಹಾಗೆ ಮಾಡಿದಾಗ ಶೂಲಿ ಸ್ವಲ್ಪ ಕಡಿಮೆಯಾಗಿತ್ತು. ಲಕ್ಕೂ! ನೀನೂ ಹಾಗೆ ಮಾಡು ಎಂದು ಹೇಳಿ ಗುಂಡಕಲ್ಲಿಗೆ ಮಂತ್ರಹಾಕಿ ನೀವಳಿಸಿ, ಸುಣ್ಣದ ನಾಮ ಇಟ್ಟು, ಹೊಟ್ಟೆಗೆ ಅವುಚಿ ಮಲಗಿಸಿದೆ. ಮೈಮರೆಯುವಂತಹ ನಿದ್ರೆ ಬಂತು. ಅಂದರೆ ಭಟ್ಟಿ ಇಳಿದಿದ್ದು ಸರಿಹೋಗಿದೆ, ಶೂಲಿ ಕಡಿಮೆಯಾಗಿದೆ ಎಂದು ಧೈರ್ಯ ಬಂತು" ಎಂದು ಅತ್ತೆಮ್ಮ ನವರು ಸಂಜೆ ವರದೀನ ಒಪ್ಪಿಸಿದರು. ನಾನೂ ನೆಲಾನೇ ನೋಡುತ್ತ ಹಾಲು ಕುಡಿದು ಮಲಗೋ ಕೊಠಡಿಗೆ ಹೋದೆ. ನನ್ನ ಹಾಸಿಗೆಯ ಮೇಲೆ ಬಿದ್ದುಕೊಂಡೆ. ನಿದ್ರೆ ಬರಲಿಲ್ಲ.

ಮಧ್ಯಾಹ್ನ ಕನಸುಬಿದ್ದಾಗ ಗುಂಡಕಲ್ಲು ಆಗಿದ್ದೆ. ಈಗ ನನ್ನ ಹೆಂಡತಿ ಗುಂಡಕಲ್ಲನ್ನು ತಬ್ಬಿಕೊಂಡು ಮಲಗಿದ್ದಾಳೆ. ಇದರ ಗೂಡಾರ್ಥ ಏನು? ಗುಂಡ ಕಲ್ಲ ಕನಸ್ಸಿನಲ್ಲಿ ನಾನೋ, ನನ್ನ ಕನಸ್ಸಿನಲ್ಲಿ ಗುಂಡಕಲ್ಲೋ ಎಂಬ ತೊಂಚಾ ವಂಚಕ್ಕೆ ಶುರುವಾಗಿದೆ. ನನಗಿಂತ ಗುಂಡಕಲ್ಲೇ ಅವಳಿಗೆ ಹೆಚ್ಚು ಮೆಚ್ಚೋ!

ಗುಂಡಕಲ್ಲಲಿ ನಾನೋ ನನ್ನೊಳಗೆ ಗುಂಡಕಲ್ಲೋ.

ನಾನೂ ಗುಂಡಕಲ್ಲು ಎರಡೂ ನಿನ್ನೊಳಗೋ, ದೇವಾ? ಎಂದು ಪದ ಹಾಡೋ ಹಾಗೆ ಆಗಿದೆ ನನ್ನ ಸ್ಥಿತಿ.

ಯಾಕೆ ಹೇಳುಕ್ಕೆ ಬಂದೆ ಅಂದರೆ, ಚೀಣೀಯರು ಆಡೋ ಮಾತೇ ಹೀಗೆ! ಗೊಂದಲದಲ್ಲಿ ಮುಳುಗಿಸಿಬಿಡುತ್ತವೆ!

—ಪ್ರಸಾದ್.

‘ ಉಹ್ಞೂ ’

ಉಹ್ಞೂ. ನಾನು ಒಪ್ಪೊಲ್ಲ. ಖಂಡಿತವಾಗಿಯೂ ಒಪ್ಪೊಲ್ಲ. ವರ್ಷಾವಧಿ ಹಬ್ಬವನ್ನ ಸಂತೆ ವ್ಯಾಪಾರದ ಮಟ್ಟಕ್ಕೆ ಇಳಿಸುಕ್ಕೆ ನಾನು ಒಪ್ಪೊಲ್ಲ.

ಮೊನ್ನೆ ತಾನೆ ಮರೀನ ಶಾಲೆಗೆ ಸೇರಿಸಬೇಕು ಎಂದೆ ನಾನೂ ಹ್ಞೂ ಅಂದೆ. ಮಕ್ಕಳು ೫-೬ ವರ್ಷಕ್ಕೆ ಶ್ರೀ ಓಂನ್ನಾಮ ಕಲಿಯುಕ್ಕೆ ಶುರು ಮಾಡಿದರೆ, ಬೆಳೆಯೋ ಹೊತ್ತಿಗೆ ನಾವು ಹಾಕುಕ್ಕಾದರೂ ಬರುತ್ತೆ ಅಂತ ನಾನು ಒಪ್ಕಿಕೊಂಡೆ ಹಿಂದಿನ ಕಾಲದಲ್ಲಿ ಓದುವ ವಯಸ್ಸಿಗೆ ಬಂದ ಹುಡುಗರನ್ನು ಗುರುಗಳ ಮನೆಗೆ ಸಾಗಹಾಕಿ ಬಿಡ್ತಿದ್ವೆವು. ಹುಡುಗರ ಊಟ ತಿಂಡಿ, ಬಟ್ಟೆ ಬರೆ, ಎಣ್ಣೆ ನೀರು ಆರೈಕೆ ಎಲ್ಲವನ್ನೂ ಗುರುಪತ್ನಿ ನೋಡಿಕೊಳ್ಳುತ್ತಿದ್ದಳು. ಹುಡುಗರೂ ಮನೆಯ ಸುತ್ತು ಕೆಲಸವನ್ನೆಲ್ಲಾ ಸಂತೋಷವಾಗಿ ಮಾಡುತ್ತಿದ್ದರು. ಹಾಗಾಗಿ ವಿದ್ಯೆ ಮತ್ತು ಮೈಕಟ್ಟು ಎರಡೂ ಚೆನ್ನಾಗುತ್ತಿತ್ತು. ಹುಡುಗ ಹಿಂತಿರುಗಿದ ಮೇಲೆ, ಸಂಪಾದಿಸುವುದಕ್ಕೆ ಶುರು ಮಾಡಿದ ಮೇಲೆ ಗುರು ದಕ್ಷಿಣೆ ಅಂತ ಕೈಲಾದ್ದನ್ನು ಕೊಡ್ತಿದ್ವ, ಈಗಿನ ಕಾಲದಲ್ಲಿ ನೋಡು! ಮರೀನ ಅ ಆ ಇ ಈ ಕ್ಲಾಸಿಗೆ ಸೇರಿಸಬೇಕಾದರೆ, ಶಾಲೆಯ ಹೊಸಲು ದಾಟುಕ್ಕೆ ಮುಂಚೆಯೇ ದಕ್ಷಿಣೆ ಕುಕ್ಕಬೇಕು. ಸೇರಿಸಿಕೊಳ್ಳುಕ್ಕೆ ದಕ್ಷಿಣೆ, ಪಾಠಕ್ಕೆ ದಕ್ಷಿಣೆ, ಆಟಕ್ಕೆ ದಕ್ಷಿಣೆ, ಮಾಸ್ತರ ಹುಟ್ಟಿದ ಹಬ್ಬಕ್ಕೆ ದಕ್ಷಿಣೆ, ಮಾಸ್ತರಿಣಿಯ ಋಷಿ ಪಂಚಮಿ ವ್ರತಕ್ಕೆ ದಕ್ಷಿಣೆ, ಹೀಗೆ ಮಾತೆತ್ತಿದರೆ ದಕ್ಷಿಣೆಕೊಟ್ಟು, ಆ ಮೇಲೆ ವರ್ಷಾ ಕಾಲ ತಂದೆ ತಾಯಿಯರು ಶಾಲೆಗೆ ಪ್ರದಕ್ಷಿಣೆ ಹಾಕುತ್ತಾ ಇರಬೇಕು. ವಿದ್ಯಾಭ್ಯಾಸ ಒಂದು ವ್ಯಾಪಾರಕ್ಕೆ ಇಳಿದುಬಿಟ್ಟಿದೆ.

ಚಿಕ್ಕ ರಾಮುಗೆ ಎಂಟನೆ ವರ್ಷ ಉಪನಯನ ಮಾಡಿ ಎಂದು ಹೇಳಿದೆ. ನಾ ಬೇಡ ಅಂದೆನೆ? ಲೋಕದ ಜ್ಞಾನವನ್ನು ತಿಳಿದುಕೊಳ್ಳಬೇಕು. ಮಾನವನ ಸ್ವರೂಪವನ್ನೂ ಅರಿಯಬೇಕು. ಹಾಗೆ ಮಾಡುವಾಗಲೂ ಕೂಡ ಬಾಳಿನ ಗುರಿಯು ಬ್ರಹ್ಮದ ಅರಿವು ಅನ್ನೋದನ್ನು ಮರೆಯಬಾರದು. ಹೀಗೆಲ್ಲಾ ನಮ್ಮ ತಾತ ನನ್ನ ಮುಂಜಿಯಲ್ಲಿ ಹೇಳಿಕೊಟ್ಟಿದ್ದನ್ನು ನಾನು ಹೇಳಲಿಲ್ಲವೇ? ಹೇಳಿ ಉಪನಯನಕ್ಕೆ ಸಿದ್ಧಮಾಡಿಕೊ ಅನ್ನಲಿಲ್ಲವೆ? ಆದರೆ ಆಗಿದ್ದೇನು? ಚಿನ್ನದ ಎಳೆ ಜನಿವಾರ ಮಾಡಿಸ ಬೇಕು ಅಂದ್ರೆ; ಬೆಳ್ಳಿ ಪಂಚಪಾತ್ರೆ ಉದ್ಧರಣೆ ಬೇಕು ಅಂದ್ರೆ. ನಮ್ಮಮ್ಮನಿಗೆ ಸೀರೆ ಉಡುಗೊರೆ ಕೊಡಬೇಕು ಅಂದ್ರೆ. ನಮ್ಮಪ್ಪನಿಗೆ ಶಾಲು ಬಹುಮಾನ ಕೊಡಬೇಕು ಅಂದ್ರೆ. ಹೀಗೆಲ್ಲಾ ಪಟ್ಟಿ ಸಿದ್ಧಮಾಡಿದೆ. ಚಿಕ್ಕ ರಾಮು ಗಾಯತ್ರಿ ಮಂತ್ರ ಕಲಿತುಕೊಂಡರೆ ನಿಮ್ಮಮ್ಮ ಯಾಕೆ ಹೊಸ ಸೀರೆ ಉಟ್ಕೊಕೋ ಬೇಕು? ನಿಮ್ಮಪ್ಪ ಯಾಕೆ ಹೊಸ ಶಾಲು ಹೊದ್ದುಕೋ ಬೇಕು? ಬ್ರಹ್ಮೋಪದೇಶವನ್ನೇ ವ್ಯಾಪಾರಕ್ಕೆ ಇಳಿಸಿಬಿಟ್ಟಿದ್ದೀರಿ!

ಸೀತೆಗೆ ಮದುವೆ ಮಾಡಬೇಕು. ಷೋಡಶ ವರ್ಷಗಳಾಯ್ತು. ಷೋಡಶ ಕಲೆಗಳನ್ನು ಅವಳು ಕಲಿತು ಪ್ರದರ್ಶಿಸಬೇಕು ಅಂತ ಬಾಳಿನ ತಿರುಳು ತಿಳಿಯುವು ದಕ್ಕೆ ಸಮಾಜ ಏರ್ಪಡಿಸಿದ ಮದುವೆಯನ್ನು ಮಾಡಿ ಎಂದಾಗ ನಾನು ಬೇಡ ಎಂದೆನೆ ?

ದಷ್ಟಪುಷ್ಟವಾದ, ಓದಿದ ಸ್ಫುರದ್ರೂಪಿ ವರಗಳನ್ನು ಹುಡುಕುಕ್ಕೆ ಹೋದರೆ ; " ಹಾಗಲ್ಲ ಅಂದ್ರೆ. ಹುಡುಗನ ತಂದೆತಾಯಿಯರ ಅಂತಸ್ತೇನು ? ಉಟ್ಟು ಉಣ್ಣುಕ್ಕೆ ಇದೆಯೇ? ತೊಟ್ಟು ಇಡುಕ್ಕೆ ಇದೆಯೇ ? ಇದೆಲ್ಲಾ ನೋಡಬೇಕು " ಎಂದು ಹೇಳಿದೆ ಯಲ್ಲಾ ! ಮಾವ ಮೊಳದುದ್ದ ಮುಂಡಾಸು ಕಟ್ಟಿಕೊಂಡರೆ ಸೊಸೆಗೆ ಬಂದ ಭಾಗ್ಯ ಏನು ? ಅತ್ತೆ ಆರಂಗುಲದ ಅಡ್ಡಿಕೆ ಹಾಕ್ಕೊಂಡರೆ, ಸೊಸೆಯ ಕೊರಳು ತಂಪಾ ಗುತ್ತ್ಯೇ ? ಹುಡುಗನಿಗೆ ಸಂಪಾದಿಸುವ ಛಾತಿ ಇದ್ದರೆ ಉಟ್ಟು ಉಣ್ಣಿಸುಕ್ಕೆ ಸಾಕಷ್ಟು ಸಿಕ್ಕೇ ಸಿಗುತ್ತೆ ತೊಟ್ಟು ಮೆರೆಯುವುದಕ್ಕೆ ಬೇಕಾದಷ್ಟು ಸಿಗುತ್ತೆ ಹುಡುಗ ಹುಡುಗಿ ಇವರಲ್ಲಿ ವರಸಾಮ್ಯ ಇದೆಯೇ ? ಇಬ್ಬರ ಮನಸ್ಸು ತಕ್ಕಮಟ್ಟಿಗೆ ಒಂದೇ ಹಂತದಲ್ಲಿ ದೆಯೇ ? ಒಬ್ಬರ ಕೂಡ ಒಬ್ಬರು ಏಗುಕ್ಕೆ ಆಗುತ್ತ್ಯೆ ? ಇದನ್ನೆಲ್ಲಾ ನೋಡೋದು ಬಿಟ್ಟು, ಮದುವೇನ ವ್ಯಾಪಾರಕ್ಕೆ ಇಳಿಸಿಬಿಟ್ಟಿದ್ದೀರಲ್ಲೇ ! ಸಂಕಲಿಕೆ ಉಟ್ಟುಕೊಂ ಡರೆ ಸಾವಿರ, ಧಾರೆ ಎರಸಿಕೊಂಡರೆ ಸಾವಿರ, ತಾಳಿ ಕಟ್ಟಿದರೆ ಸಾವಿರ, ಸಪ್ತ ಪದಿ ಹಾಕಿದರೆ ಹೆಜ್ಜೆಗೆ ಸಾವಿರ, ಹಸೆಮೇಲೆ ಕೂತರೆ ಸಾವಿರ, ಮಂಚದ ಮೇಲೆ ಕೂತರೆ ಸಾವಿರ ಹೀಗೆ ಸಾವಿರ ಸಾವಿರ ಕಾಲುವೆಗಳನ್ನೇ ಹರಿಸಿ ಬಿಡ್ತೀರಲ್ಲೇ ! ಮನೆಗೆ ಗೃಹಲಕ್ಷ್ಮಿ ಬರುತ್ತಾಳೆ ಅಂತ ಹಬ್ಬ ಮಾಡೋದಿರಲಿ ; ಗ್ರಹ ಚಾರ ಬಿಡಿಸಿ ಬಿಡ್ತೀರಲ್ಲೇ !

ವಿದ್ಯಾಭ್ಯಾಸ, ಉಪನಯನ, ವಿವಾಹ ಇಂತಹ ವಿಷಯಗಳನ್ನೇ ವ್ಯಾಪಾರಕ್ಕೆ ಇಳಿಸಿಬಿಟ್ಟಿದ್ದೀರಲ್ಲೇ !

ಅದಕ್ಕೇ ನಾನು ಹಠ ಹಿಡಿದು ಹೇಳೋದು, ಈ ಸರ್ತಿ ಉಗಾದಿ ಹಬ್ಬವನ್ನು ವ್ಯಾಪಾರಕ್ಕೆ ಇಳಿಸಲೇಬಾರದು ಅಂತ ಬೇವಿನ ಸೊಪ್ಪನ್ನು ಸಾಲು ಮರಗಳಿಂದ ತರಿದು ತರ್ತೀನಿ. ಬೆಲ್ಲದ ಅಚ್ಚನ್ನು ಕೊಂಡು ಕೊಂಡು ಬರ್ತೀನಿ ನಾವು ನಾವೇ ಹಣದ ಮಾತಾಡದೆ, ವ್ಯಾಪಾರಕ್ಕೆ ಇಳಿಸದೆ ವರ್ಷಾವಧಿ ಹಬ್ಬಾನ ತಿಳಿ ಮನಸ್ಸಿ ನಿಂದ ಆಚರಿಸೋಣ ಎಂದು ಗಿಣಿಗೆ ಹೇಳಿದ ಹಾಗೆ ಹೇಳಿದೆ.

ಅದಕ್ಕೆ ಜವಾಬು ಏನು ಕೊಟ್ಟರು ಗೊತ್ತೆ ? ಮನೆಯಾಕೆ ; ದಿಟ ಅಂದರೆ ವರ್ಷಕ್ಕೊಂದು ಸರ್ತಿ ಯುಗಾದಿ ಬರುತ್ತೆ. ಹೊಸ ವರುಷ ತುಸ ಹರುಷ ತರಲಿ ಅಂತ ಎಲ್ಲರೂ ಆಸೆ ಪಡ್ತಾರೆ ಬಾಯಿ ಸಿಹಿಯಾಗಿರುತ್ತೆ ಅಂತ ಹಬ್ಬ ಮಾಡ್ತಾರೆ. ಆದರೆ ನೀವು ಹೇಳೋ ಹಾಗೆ ವ್ಯಾಪಾರಕ್ಕೆ ಇಳಿಸಬಾರದು ಅಂದ್ರೆ ಉಗಾದಿ ಗೋಸ್ಕರ ನನಗೆ ಸೀರೆ ಕೊಂಡುಕೊಂಡು ಬರಬೇಡಿ. ಹೊಸ ಒಡವೆ ಮಾಡಿಸ

ಬೇಡಿ; ಮಕ್ಕಳಿಗೆ ಹೊಸ ಬಟ್ಟೆ ಹೊಲಿಸಬೇಡಿ, ಒಬ್ಬಟ್ಟು ಪಾಯಸ ಕೂಡ ಬೇಡ. ನೀವು ಹೇಳಿದ ಹಾಗೆ ಬೇವು ಬೆಲ್ಲ ತಿಂದು, ಅನ್ನ ಗೊಡ್ಡಸಾರನ್ನೇ ತಿನ್ನೋಣ. ಅರೆ ಹೊಟ್ಟೆ ಆದರೆ ಅಷ್ಟರಲ್ಲೇ ಸಂತೋಷ ಪಡೋಣ. ಆದರೆ, ಆದರೆ ಅಂದ್ರೆ.

ಹಬ್ಬದ ದಿವಸ ಬುದ್ಧಿವಾದ ಹೇಳುಕ್ಕೆ ಬರಬೇಡಿ ಅಂದ್ರೆ; ಕುಂಟು ವಿಚಾರ ಸರಣೀನ ಪೋಣಿಸಬೇಡಿ ಅಂದ್ರೆ. ಬೇವಿನ ಕಹಿ ಇರುವ ಮಾತು ಆಡದೆ ಇದ್ದರೆ ಆದೇ ಹಬ್ಬ ಅಂದರೆ.

ತ್ಸು ತ್ಸು ಅಂತ ಲೊಚಗುಟ್ಟಿ ಸ್ವಲ್ಪ ಹೊತ್ತು ಮೌನವಾಗಿದ್ದು ಅದಕ್ಕೇ ತಿಳಿದ ಹಿರಿಯರು ಗಾದೆ ಕಟ್ಟಿದ್ದರು ಅಂತ ಕಾಣುತ್ತೆ. ಹಬ್ಬದ ದಿವಸವೂ ಹಳೇ ಗಂಡನೇ! ಅಂತ.

Statement about ownership and other particulars about newspaper **KORAVANJI** to be published in the first issue every year after last day of February

FORM IV (SEE RULE 8)

1.	Place of Publication	BANGALORE
2.	Periodicity of its publication	MONTHLY
3.	Printer's Name	SHRI B. SREENIVASA IYENGAR
	Nationality	INDIAN
	Address	COTTONPET, BANGALORE.
4.	Publisher's Name	SHRI B N GUPTA
	Nationality	INDIAN
	Address	C/o KORAVANJI, BANGALORE-9.
5.	Editor's Name	M. SIVARAM
	Nationality	INDIAN
	Address	PROPRIETOR, KORAVANJI BANGALORE-9
6.	Names and addresses of individuals who own the newspapers and partners or shareholders holding more than one per cent of the total capital	M. SIVARAM Sole Proprietor KORAVANJI BANGALORE-9

I, M. SIVARAM, hereby declare that the particulars given above are true to the best of my knowledge and belief.

M. SIVARAM

Date 29-2-1964 *For Signature of Publisher.*

ವಿದ್ಯುಚ್ಛಕ್ತಿಯ ಮಿತವ್ಯಯಕ್ಕೆ

ಹಾಗೂ

ಪ್ರಕಾಶಮಾನವಾಗಿರುವುದಕ್ಕೆ

★

ಬೆಂಗಾಲ್ ಬಲ್ಬುಗಳು

★

ಬೆಂಗಾಲ್ ಎಲೆಕ್ಟ್ರಿಕಲ್ಸ್, ಬೆಂಗಳೂರು-೩

Koravanji, March 1964

Printed by B. S. Iyengar, Bangalore-2
Publisher—B. N. Gupta. Editor—M. Sivaram